


ಅಂಕಣ

ಸೆಪ್ಟೆಂಬರ್ 1983



ಅಂಕಣ

ಸೆಪ್ಟೆಂಬರ್ 1983

ಸಂಪುಟ-5
ಸಂಚಿಕೆ-1

'ಅಂಕಣ' ಐದನೆಯ ವರ್ಷಕ್ಕೆ ಕಾಲಿರಿಸಿದೆ. ಈ ಸಂದರ್ಭದಲ್ಲಿ ಚಂದಾದಾರರಿಗೆ, ಲೇಖಕರಿಗೆ ಮತ್ತು ಜಾಹಿರಾತುದಾರರಿಗೆ ನಮ್ಮ ವಂದನೆಗಳು.

ತಮ್ಮ ಸ್ವಾರ್ಥವಿಲ್ಲದ ಸಮಾಜಸೇವೆಗಾಗಿ, ಜಮನಾಲಾಲ್ ಬಜಾಜ್ ಪ್ರಶಸ್ತಿಯನ್ನು ಪಡೆದಿರುವ ಶ್ರೀ ತಗಡೂರು ರಾಮಚಂದ್ರರಾಯರಿಗೆ 'ಅಂಕಣ'ದ ಅಭಿನಂದನೆಗಳು.

'ಶೂದ್ರ' ಪತ್ರಿಕೆಗೆ ಹತ್ತು ವರ್ಷ ತುಂಬಿದೆ. ಕಳೆದ ಹತ್ತು ವರ್ಷಗಳಿಂದ ಈ ಪತ್ರಿಕೆಯನ್ನು ಶ್ರೀ ಎಂ. ಶ್ರೀನಿವಾಸ್ ಸಾಹಸದಿಂದ ನಡೆಸಿಕೊಂಡು ಬರುತ್ತಿದ್ದಾರೆ. ನಮ್ಮ ಬಹುಪಾಲು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಮುಕ್ತವಾಗಿ ದಾಖಲು ಮಾಡುತ್ತಾ ಬಂದಿರುವ 'ಶೂದ್ರ', ಕನ್ನಡ ಕಿರುಪತ್ರಿಕೆಗಳ ಇತಿಹಾಸದಲ್ಲಿ ಸ್ಥಾನವನ್ನು ಪಡೆದಿದೆ. ಈ ಹರ್ಷ ಸಮಯದಲ್ಲಿ ಶ್ರೀ ಎಂ. ಶ್ರೀನಿವಾಸ್ ಮತ್ತು 'ಶೂದ್ರ' ಬಳಗಕ್ಕೆ 'ಅಂಕಣ'ದ ಪ್ರೀತಿಯ ಅಭಿನಂದನೆಗಳು.

'ಅಂಕಣ'ವನ್ನು ನಾಲ್ಕು ವರ್ಷಗಳಿಂದಲೂ, ತಮ್ಮದೇ ಎಂಬ ವಿಶ್ವಾಸದಿಂದ ಮುದ್ರಿಸುತ್ತಾ, ನಮ್ಮ 'ಕಿರುಕುಳ'ವನ್ನು ಸದಾ ನಗುಮುಖದಿಂದ ಸ್ವೀಕರಿಸುತ್ತಾ ಮತ್ತು 'ಅಂಕಣ'ಕ್ಕೆ ರಿಯಾಯಿತಿಗಳನ್ನು ತೋರುತ್ತಿರುವ ಇಳಾ ಮುದ್ರಣದ ಲವಲವಿಕೆಯ ಯುವಕ ಶ್ರೀ ಬಿ. ಗುರುಮೂರ್ತಿ 26 ಅಕ್ಟೋಬರ್ 1983ರಂದು ಸೌ|| ಭಾರತಿಯವರೊಂದಿಗೆ ಮದುವೆಯಾದರು. ಈ ಅಂದದ ದಂಪತಿಗಳಿಗೆ 'ಅಂಕಣ'ದ ಶುಭಾಶಯಗಳು.

'ಅಂಕಣ'

8, 'ಚಿರಂಜೀವಿ', ಹಳೇ ಈಜುಕೊಳದ ರಸ್ತೆ, ಕೋದಂಡರಾಮಪುರ, ಬೆಂಗಳೂರು-560 003

ಈ ಸಂಚಿಕೆಯಲ್ಲಿ

ಲೇಖನಗಳು

ಟಿಪ್ಪಣಿಗಳು

ಪ್ರಕಟಣೆ : 'ಪಿ.ಪಿ' ಬಳಗದ ಗೆಳೆಯರಿಂದ

ವಾರ್ಷಿಕ ಚಂದಾ : ಹತ್ತು ರೂಪಾಯಿ

'ಅಂಕಣ' ಸ್ಥಾಯಿನಿಧಿ : ನೂರು ರೂಪಾಯಿ

'ಸಾಂಪ್ರತ' ಮತ್ತು ಶುಭ ಅಭಿರುಚಿ

–ಶಂ. ಮೊಕಾಶಿ ಪುಣೇಕರ

'ಸಾಂಪ್ರತ'*ದ ಹಾ. ಮಾ. ನಾಯಕರನ್ನು ಕಳೆದ ಹದಿನೈದು ವರ್ಷಗಳಿಂದ ಬಲ್ಲೆ. ಬೊಂಬಾಯಿಯಲ್ಲಿ ಇರುವಾಗ ಅವರ 'ಅಂಕಣ' ಲೇಖ ಓದಿ ಅವರ ಬಹುಮುಖ ಪ್ರತಿಭೆಗೆ ಮನಸೋತಿದ್ದೆ. ಏಕಮುಖ ವಿದ್ವತ್ತಿಗಿಂತ ನನಗೆ ಬಹುಮುಖ ಪ್ರತಿಭೆ ಯಾವಾಗಲೂ ಪ್ರಿಯ. ಜಗತ್ತಿನ ಭವಿಷ್ಯ ಇಂಥವರ ಚಿಂತನೆಯಿಂದ ರೂಪುಗೊಳ್ಳುತ್ತದೆಯೆಂದು ನಾನು ನಂಬುತ್ತೇನೆ. ಇಂಥವರು ವಿದ್ಯೆಯ ಶಿಸ್ತಿಗಾಗಿ ಒಂದೆರಡು ವಿಜ್ಞಾನಗಳನ್ನು ಕೂಲಂಕಷವಾಗಿ ಅಭ್ಯಸಿಸುತ್ತಾರೆ. ಆದರಿಂದ ಪಡೆಯುವದು ವೈಜ್ಞಾನಿಕ ಶಿಸ್ತನ್ನು ಮಾತ್ರ. ಆ ಶಿಸ್ತನ್ನು ತಮ್ಮ ವಿಶ್ವಾಸಗಳಿಗೆ ಅಳವಡಿಸಿಕೊಂಡು ಪ್ರತಿಪಕ್ಷದ ನ್ಯೂನಾತಿರೇಕಗಳನ್ನು 'ಮಾಡರೇಟ' ಮಾಡುವ ಉದಾತ್ತ ಕೆಲಸಕ್ಕೆ ಬಳಸಿಕೊಳ್ಳುತ್ತಾರೆ. ಎಚ್. ಜಿ. ವೆಲ್ಸ, ಎಂ. ಎನ್. ರಾಯ, ಅಲ್ಡಸ್ ಹಕ್ಸ್ಲಿ ಈ ಬಗೆಯ ಪ್ರತಿಭೆಯುಳ್ಳವರು. "ಎಲ್ಲ ಶಾಸ್ತ್ರಗಳು ಮುಗಿದ ಮೇಲೆ ತತ್ವಜ್ಞಾನಿ ಬಂದು ಅವನ್ನು ಒಂದು ಚೌಕಟ್ಟಿನಲ್ಲಿ ಹಾಕುತ್ತಾನೆ" ಎಂಬುದು ಇಂಥವರ ಕಾರ್ಯಕ್ಕಾಗಿಯೇ. ವಿಜ್ಞಾನಗಳು 'ಏಕೆ' ಎಂದು ಪ್ರಶ್ನಿಸುತ್ತವೆ. ಇಂಜಿನಿಯರರು 'ಹೇಗೆ' ಎಂದು ಪ್ರಶ್ನಿಸುತ್ತಾರೆ. 'ಅವರ ಶೋಧಗಳ ಅರ್ಥವೇನು ? ವಿಶ್ವದ ಜ್ಞಾನಸೂತ್ರದಲ್ಲಿ ಅವು ಎಲ್ಲಿ ಹೊಂದುತ್ತವೆ ? ಅವುಗಳಿಂದ ಇತರ ವಿಜ್ಞಾನಗಳ ಅರ್ಥದಲ್ಲಿ, ವ್ಯಾಪ್ತಿಯಲ್ಲಿ, ಸೂಚನೆಗಳಲ್ಲಿ ಏನು ಅಂತರ ಬಿದ್ದಿತು?' ಇಂಥ ಸೂಕ್ಷ್ಮಾರ್ಥವನ್ನು ಸಂಶೋಧಿಸುತ್ತಾರೆ ಬಹುಮುಖರು. ಇಂಗ್ಲಿಷಿನಲ್ಲಿ ಇಂಥವರಿಗೆ 'ಎನ್‌ಸೈಕ್ಲೊಪೀಡಿಸ್ಟ' ಎನ್ನುತ್ತಾರೆ.

ಕರ್ನಾಟಕವು ಇಂಥ ಬಹುಮುಖ ಪ್ರತಿಭಾ ಪೋಷಣೆಗೆ ಹಿಂದೆ ಬಿದ್ದಿದ್ದಿಲ್ಲ. ನವೋದಯದ ಹರಿಕಾರ ಪೈ, ನವೋದಯದ ಮಾಸ್ತಿ-ಕಾರಂತರು ಇದೇ ತರಗತಿಯವರು. ಅನಕೃ ಕೂಡ ಇದೇ ರೀತಿಯವರಾದರೂ ಕೆಲವು ಮಾನಸಿಕ ತುಮುಲಗಳ ಮೂಲಕ ಈ ಪ್ರವಾಹವನ್ನು ತುಸು ಕಿರಿಯುಗಲಗೊಳಿಸಿದರು. ಆದರ ವಿಸ್ತಾರ ಮಾನವ ಹಿತಸಾಧನೆಯ ಗುರಿಯನ್ನು ತುಸು ಮೊಟಕು ಮಾಡಿದರು. ಸ್ವಾತಂತ್ರ್ಯೋತ್ತರ ನವ್ಯಯುಗದಲ್ಲಿ ಪರಸ್ಪರ ದ್ವೇಷಾಸೂಯೆಗಳು ತೀವ್ರಗೊಂಡು, ಪ್ರತಿಭೆ ಇದ್ದೂ ಅದರ ಎತ್ತರ ಬಹಳ ಕಡಿಮೆಯಾಯಿತು. ಆದರೂ ನಾವು ಭಾರತದ ಅನೇಕ ಪ್ರಾಂತ್ಯಗಳಿಗಿಂತ ಉದಾತ್ತಬುದ್ಧಿಯವರು. ಇಂಗ್ಲಿಷ, ತಮಿಳು, ಮರಾಠಿ ಭಾಷೆಗಳು ತಮ್ಮ ಪತ್ರಿಕಾ ವ್ಯವಸಾಯದ ಅಧೋಗತಿಯನ್ನು ಇಂದಿಗೂ ಅನುಭವಿಸುತ್ತಿವೆ. ಕೆಲವು ಭಾಷೆಗಳಲ್ಲಿ ಮೊನಚಿದೆ ; ಪ್ರತಿಭೆಯಿದೆ ; ಆದರೆ ಬಹುಮುಖತೆ ಇಲ್ಲ ; ವಿಶಾಲ ದರ್ಶನವಿಲ್ಲ.

---

* ಮಿತ್ರ ಪ್ರಕಾಶನ, ಮೈಸೂರು

ಕರ್ನಾಟಕದಲ್ಲೂ ಕೆಲವೇ ಪತ್ರಿಕೆಗಳು ಕಳೆದ ಹತ್ತು-ಹದಿನೈದು ವರ್ಷಗಳಲ್ಲಷ್ಟೇ ನಮ್ಮ ಉದಾತ್ತತೆಯನ್ನು, ಭಾವಶುದ್ಧಿ – ಭಾಷಾಶುದ್ಧಿ – ಮಾನವೀಯತೆಯನ್ನು ಕಳೆದುಕೊಂಡಿವೆ, ಅಷ್ಟೆ. ಬಹ್ವಂಶದಲ್ಲಿ ನಮ್ಮ ಪತ್ರಿಕೆಗಳು ನಮ್ಮ ರೀತಿನೀತಿಗಳನ್ನು, ಶುಭ ಅಭಿರುಚಿಯನ್ನು, ಕಾಯ್ದುಕೊಂಡಿವೆ.

ಹಾ.ಮಾ.ನಾಯಕರು ಜನಪ್ರಿಯ ಪತ್ರಿಕೆಗಳಲ್ಲಿ 'ಅಂಕಣ' ಏಕೆ ಬರೆಯುತ್ತಾರೆ? ಶುಭ ಅಭಿರುಚಿಯ ಪೋಷಣೆಗಾಗಿ. ಅವರ ಅಂಕಣಗಳನ್ನು ಓದಿದವರಿಗೆ ನನ್ನ ಮಾತಿನ ಅರ್ಥ ಆಗಬಹುದು. ಸಾಹಿತ್ಯ-ಜೀವನ-ವಿದ್ವತ್ತೆ-ಮಹಾಜನರು-ಘಟನೆ-ಪ್ರಸಂಗಗಳು-ಅವರ ಅಂಕಣದ ವಿಷಯಗಳು. ಅವರು ಸಾಹಿತ್ಯಕ ಅಥವಾ ಅದರ ಸಂಲಗ್ನ ವಿಷಯ ಗಳನ್ನೇ ಆಯ್ದುಕೊಳ್ಳುತ್ತಾರೆ. ಒಮ್ಮೊಮ್ಮೆ ರಾಜಕಾರಣದ ನಮೂದು ಬಂದರೂ, ಸಾಹಿತ್ಯಿಕ ಆಸಕ್ತಿಯಿಂದಲೇ ನಮೂದು ಹುಟ್ಟಿದ್ದು. ಈ ನಿಬಂಧನೆ ಬಹುಮುಖ ಅಂಕಣಕಾರನಿಗೆ ಕಿರಿದಾದರೂ, ಸಫಲ ಕೃಷಿಗೆ, ಸಮರ್ಥ ನಿರ್ವಹಣೆಗೆ ಬೇಕಾಗುವ ಪರಿಧಿ. ಇನ್ನೂವರೆಗೆ ಸಮರ್ಥವಾಗಿ ಪಾಲಿಸಿದ್ದಾರೆ. ಇಂಥ ನಿಷ್ಠುರ ಶಿಸ್ತಿನಲ್ಲೆ ಸುಖವಾಗಿ ಅವರು ವಿಹಾರ ಮಾಡುತ್ತಾರೆ. ಇದು ನನಗೆ ಬಹಳ ಮಹತ್ವದ ಬಂಧನ ವೆಂದು ತೋರುತ್ತದೆ. ಭಾರತದಲ್ಲೇ ಇಷ್ಟು ಶಿಸ್ತಿನ ಬಂಧನವನ್ನು ಪಾಲಿಸುವವರು ನನಗೆ ಕಂಡಿಲ್ಲ. ಬೊಂಬಾಯಿಯಲ್ಲಿ ನನಗೆ ಅನೇಕ ಅಂಕಣಕಾರರು ಭೆಟ್ಟಿಯಾಗಿದ್ದಾರೆ. ಅವರಿಂದ ಆಯಾ ಭಾಷಾ ಸಾಹಿತ್ಯದ, ಪತ್ರಿಕಾ ವ್ಯವಸಾಯದ ಓರೆ ಕೋರೆಗಳ ಪರಿಚಯ ನನಗೆ ಆಗಿದೆ. ಅವರಲ್ಲಿ ಇಂಥ ಸುಸಂಸ್ಕೃತ ಬಂಧನದಲ್ಲಿ ಹಗುರವಾಗಿ ಸಂಚಾರ ಮಾಡುವವರನ್ನು ನಾನು ಕಂಡಿಲ್ಲ. ಶಿಸ್ತಿನ ಬಂಧನವೇ ಇತರರಿಗೆ ಬರ್ಷಣ ವಾಗುತ್ತದೆ. ಹಾ. ಮಾ. ನಾಯಕ ಅವರಲ್ಲಿ ಇದು ಸ್ವಯಂಸ್ವೀಕೃತ ಬಂಧನ.

ಯಾವ ಬಗೆಯ ಓದುಗರಿಗಾಗಿ ಹಾ. ಮಾ. ನಾ. ಬರೆಯುತ್ತಾರೆ?–ಸುಶಿಕ್ಷಿತ ಅಸಂಸ್ಕೃತರಿಗಾಗಿ ; ಅವರಲ್ಲಿ ಶುಭ ಅಭಿರುಚಿ ಹುಟ್ಟಿಸುವದಕ್ಕಾಗಿ. ಜಗತ್ತಿನಲ್ಲಿ ಇನ್ನೂ ಸಜ್ಜನರಿದ್ದಾರೆ, ಸದ್ಗ್ರಂಥಗಳು, ಸತ್ಕೃತಿಗಳು ಇವೆ ಎಂದು ಮನವರಿಕೆ ಮಾಡಿ ಕೊಡುತ್ತಾರೆ ; ನಮ್ಮ ಡೆಮಾಕ್ರಾಟಿಕ್ ಶಿಕ್ಷಣ ಪದ್ಧತಿಯ ಅಸಂಸ್ಕೃತ ವಿಧಾನಗಳ ಕುಂದುಕೊರತೆಗಳನ್ನು ತಿದ್ದಲು ಯತ್ನಿಸುತ್ತಾರೆ ; ಸುಶಿಕ್ಷಿತರಲ್ಲೇ ಅಸಂಸ್ಕೃತಿ ಹೆಚ್ಚು. ನಮ್ಮ ಸಂಘ-ಸಂಸ್ಥೆಗಳ ವ್ಯವಹಾರದಲ್ಲಿ ಸಭ್ಯತೆಯ ಅಭಾವಗಳನ್ನು ತಮ್ಮ ವ್ಯಂಗ್ಯ ಧ್ವನಿಯಲ್ಲಿ ನಿರ್ಭರ್ತ್ಸಿಸಿದ್ದಾರೆ. ನೈಜ ಪ್ರತಿಭೆ, ಸದ್ಗುಣಗಳಿಗೆ ಪ್ರೋತ್ಸಾಹ ಕೊಡುವಲ್ಲಿ ಕೇವಲ ಹೊಗಳಿಕೆಯನ್ನು ಹರಿಬಿಡದೆ, ಅರ್ಥಪೂರ್ಣ ಘಟನೆ-ಪ್ರಸಂಗ ಗಳನ್ನು ಉಲ್ಲೇಖಿಸಿ ವ್ಯಕ್ತಿ ಮಹಿಮೆಯನ್ನು ಜೀವಂತಗೊಳಿಸಿದ್ದಾರೆ. ಹನುಮಂತಯ್ಯ, ಹುಕ್ಕೇರಿ, ಮನಸೂರ, ನಾಡಿಗ, ಭಟ್ಟ, ಜೆ ಪಿ ನಾಯಕ, ನಿಹಾರರಂಜನ್‌ರಾಯ, ಪೊಟ್ಟೆಕ್ಕಾಟ, ಇವರ ವ್ಯಕ್ತಿಚಿತ್ರಗಳೂ, ತದ್ವಿರುದ್ಧ ತಮಗೆ ಒಗ್ಗದ ಹಲವಾರು ಸಾರ್ವಜನಿಕ ವ್ಯಕ್ತಿಗಳ ಚಿತ್ರಣಗಳೂ, ಆಯಾ ಘಟನೆಗಳ ಮೂಲಕವೇ ಜೀವಂತ

ಗೊಂಡಿವೆ. ಘಟನೆಗಳ ನಿರೂಪಣೆಯನ್ನು ಆಯ್ದ ಕೆಲವೇ ಶಬ್ದಗಳಲ್ಲಿ ಅರ್ಥಗೌರವ ದಿಂದ ಹೇಳಿ ಮುಂದೆ ಸಾಗುತ್ತಾರೆ. ಹೀಗೆ ಜೀವಂತಗೊಂಡ ವ್ಯಕ್ತಿ ಚಿತ್ರಣ ನಮ್ಮ ಜೊತೆಗೆ ಸ್ವತಂತ್ರವಾಗಿ ಮಾತಾಡತೊಡಗುತ್ತದೆ. ನಿರ್ಭರ್ತ್ಸನೆಯಲ್ಲೂ ಸಂಯಮ; ಪ್ರಶಂಸೆಯಲ್ಲೂ ಸಂಯಮ. ತತ್ವವಿವರಣೆಯಲ್ಲೂ ಖಚಿತ ಶಬ್ದಗಳಲ್ಲಿ ಖಚಿತ ನಿರ್ಣಯ. ಕೆಳಗಿನ ವಾಕ್ಯದ ಅರ್ಥವ್ಯಾಪ್ತಿ ಬೆರಗುಗೊಳಿಸುವಂಥದು:
"ನಮಗೆ ಬೇಕಾದದ್ದು ಐಕ್ಯವಲ್ಲ; ಸಾಮರಸ್ಯ".

ಇಂಥ ವೈಚಾರಿಕ ಆಳದ ಜೊತೆಗೆ ವಿಸ್ತಾರ ದರ್ಶನ, ಭವಿಷ್ಯತ್ತಿನ ಬಗ್ಗೆ ಕಳಕಳಿ, ದಿಶೆಯನ್ನು ನಾಡಿಯಿಂದಲೇ ಪರೀಕ್ಷಿಸಿ ನೋಡಿ ಸಕಾಲಿಕ ಎಚ್ಚರ ನೀಡು ವದು, ಲೋಕಸತ್ತೆಗೆ ಬೇಕಾಗುವ ಸಂಯಮ-ವಿನಯ, ಉತ್ತಮರ ಬಗ್ಗೆ ಶ್ರದ್ಧೆ-ಭಕ್ತಿ ಈ ಸಾತ್ವಿಕ ಗುಣಗಳು ಹಾ. ಮಾ. ನಾ. ರವರನ್ನು ಕರ್ನಾಟಕದ ವಿವೇಕ ಕೇಂದ್ರ ವನ್ನಾಗಿ ಮಾಡಿದೆ. ಅವರ ಸದ್ಗುಣಗಳೇ ಅವರಿಗೆ ಮುಕ್ತ ಮಾತಾಡುವ ಅಧಿಕಾರ ತಂದುಕೊಟ್ಟಿದೆ. (ಸರಕಾರ ಕೊಡಮಾಡಿದ ಶಾಲನ್ನು ಸ್ವೀಕರಿಸಿದರೇ ಹೊರತು 5000 ರೂಪಾಯಿ ಇನಾಮು ಸ್ವೀಕರಿಸದಿರುವುದು ತಮ್ಮ ವಿಚಾರ ಸ್ವಾತಂತ್ರ್ಯದ ರಕ್ಷಣೆಗಾಗಿಯೇ ಎಂದು ತಿಳಿದುಬಂತು). ವಿವೇಕಧ್ವನಿ ಪ್ರಸಂಗೋಚಿತವಾಗಿ (ಆದರೆ ಸಂಯಮ ಬಿಡದೆ) ನಿಷ್ಠುರಕ್ಕೂ ಸಿದ್ಧವಾಗಿರಬೇಕು. ಮುಖ್ಯಮಂತ್ರಿ ಗುಂಡೂ ರಾಯರು, ಡಾ. ರಾಜಾರಾಮಣ್ಣ, ಇಂಥವರ ಸಡಿಲು ಮಾತುಗಳು ಸ್ಥಳ-ಕಾಲ-ಸ್ಥಾನಗಳ ತಳಹದಿಯ ಮೇಲೆ ನಿರ್ಭರ್ತ್ಸನೆಗೆ ಗುರಿಯಾಗಿವೆ. ಅವರ ಒಳ್ಳೆಯ ಕೆಲಸಕ್ಕೆ ಆದರವಿದ್ದೂ ಅವರ ಅವಿವೇಕವನ್ನಷ್ಟೇ ಟೀಕಿಸಿದ್ದು disarming candour ಏ ಹೊರತು ವ್ಯಕ್ತಿಟೀಕೆಯಲ್ಲ. ಗೇಲಿ ಮಾಡಿಯೂ ವಿವೇಕದ ಪರಿಘವನ್ನು ದಾಟಿಲ್ಲ. ಗುಂಡೂರಾಯರನ್ನು ಟೀಕಿಸುವಾಗ ಇಂದಿರಾಗಾಂಧಿಯ ಹೆಸರು ಎತ್ತಿದ್ದು ನನ್ನಂಥ ವನಿಗೆ ರೋಚಕವಾಗದಿದ್ದರೂ ಗೇಲಿಯ ಗಾಳಿಯನ್ನು ಸವಿಯಬಲ್ಲೆ. ಕುರ್ಚಿ ಪ್ರಕರಣ, ಚೂಯಿಂಗ ಗಮ್, ಕಸಾಪ ಚುನಾವಣೆ, ಕೃತಿಚೌರ್ಯ, ವಿಶ್ವ ಸಮ್ಮೇಳನ ಎಲ್ಲವೂ ಹಾಸ್ಯಕ್ಕೆ ಗುರಿಯಾದರೂ ಗುರಿ ಒಂದೆ-ಸಂಸ್ಕೃತಿ, ಸಭ್ಯತೆ, ಶುಭ ಅಭಿರುಚಿ, ಸಜ್ಜನಿಕೆ. ಇದೆಲ್ಲ ಪ್ರೇಮಚಂದ ಹೇಳಿದ "ಮಹಾಜನ ಸಂಸ್ಕೃತಿ'ಯ ರಕ್ಷಣೆಗಾಗಿ.

ಇನ್ನು ಕೊನೆಯ ಮಾತು ಶುಭ ಅಭಿರುಚಿಗೆ ಬದ್ಧವಾದ, ಚಟುಲಮತಿಯ ಬಹುಶ್ರುತ ಅಂಕಣಕಾರನೊಬ್ಬ ನಾಡು-ನುಡಿ-ಸಾಹಿತ್ಯಗಳ ಮೇಲೆಯೇ ತನ್ನ ವಿವೇಕ ದೃಷ್ಟಿಯನ್ನು ಕೇಂದ್ರೀಕರಿಸಿ ಬರೆಯುತ್ತಿರುವದು ಕರ್ನಾಟಕಕ್ಕೆ ಹೆಮ್ಮೆಯ ವಿಷಯ. ನಾನು ಅರಿತ ಭಾರತೀಯ ಭಾಷೆಗಳಲ್ಲಿ ಇಂಥ ಲೇಖಕ ವಿಮರ್ಶಕರನ್ನು ಕಂಡಿಲ್ಲ. ಇಂಗ್ಲಿಷೂ ಸೇರಿದಂತೆ ನನಗೆ ಗೊತ್ತಿರುವ ನಾಲ್ಕೈದು ಮುಖ್ಯ ಭಾರತೀಯ ಭಾಷೆಗಳ ಪತ್ರಿಕೋದ್ಯಮದಲ್ಲಿ, ಡಾ.ಹಾ.ಮಾ. ನಾಯಕರ ಅಂಕಣಗಳಂತೆ ಸಾಂಸ್ಕೃತಿಕ ಮಹತ್ವ ಮತ್ತು ಸಾಹಿತ್ಯಿಕ ಸೌಂದರ್ಯವಿರುವ ಅಂಕಣಗಳನ್ನು ನಾನು ನೋಡಿಲ್ಲ. ವಿಷಯಗಳ ಆಯ್ಕೆ, ನಿರೂಪಣೆ, ಪ್ರತಿಪಾದನೆಗಳಲ್ಲಿ ಅವರು ಅದ್ವಿತೀಯರು. ಕರ್ನಾಟಕದ ಭೌತಿಕ

ಬಹುಮುಖತೆ, ಸತ್ವಗುಣ, ಸ್ವಾತಂತ್ರ್ಯೋತ್ತರ ನವ್ಯಯುಗದ ಸಂಯಮರಹಿತ ಲಂಗುಲಗಾಮಿಲ್ಲದ ಕಿರುಚಾಟದಲ್ಲಿ ಮಾಯವಾಗುತ್ತದೋ ಎಂದು ನಾನು ಹೆದರಿದ್ದೆ, ಹದಿನೈದು ವರ್ಷಗಳ ಹಿಂದೆ. 1966ರಲ್ಲಿ ಬಂದ ಅವರ ಎರಡು–ಮೂರು ಲೇಖನಗಳನ್ನು ಓದಿ, "ನಮ್ಮ ಪತ್ರಿಕೆಗಳಲ್ಲಿ ಗುಂಡಪ್ಪ-ಮಾಸ್ತಿಯವರ ಗುಣವಿದ್ದ ಈ ಧ್ವನಿ ಯಾರದು?" ಎಂದು ಕುತೂಹಲಗೊಂಡಿದ್ದೆ. 1967ರಲ್ಲಿ ಪ್ರತ್ಯಕ್ಷ ಭೆಟ್ಟಿಯಾದಾಗ "ನೀವು ಬುದ್ಧಿವಂತರು" ಎಂದು ಉತ್ಸಾಹದಿಂದ ಹೇಳಿದ್ದೆ. ಅಲ್ಲಿಂದೀಚೆಗೆ ಕಿರುಚಾಟದ ಪತ್ರಿಕೆಗಳೂ ಹೆಚ್ಚಾಗಿವೆ. ನಿಜ ಅಥವಾ ಕಾಲ್ಪನಿಕ ಸಂದರ್ಭಗಳೂ ಕಿರುಚಾಟಕ್ಕೆ ಪುಟ ಕೊಟ್ಟಿವೆ. ಕನ್ನಡ ಭಾಷೆ ಕಿರುಚಾಟಕ್ಕೆ ತಕ್ಕ ಭಾಷೆಯಲ್ಲವೆನ್ನುವ ಕಾರಣದಿಂದಲೇ ಕಿರುಚಾಟ ಕಿರುಚಾಟವೆಂದಾಗಿಯೇ ಎದ್ದು ಕಾಣಿಸುತ್ತದೆ; ಹೊಣೆಗಾರ ಬರಹವೆಂದು ಕಾಣಿಸುವುದಿಲ್ಲ. ಇಂಥ ಸಂದರ್ಭದಲ್ಲೂ ಭಾಷೆಯ ತಳಸ್ಪರ್ಶಿ ಗುಣವಿವೇಕಗಳ ಜೀವಂತ ಧ್ವನಿಯಾಗಿ ಉಳಿದುಕೊಂಡದ್ದು ಹಾ. ಮಾ. ನಾ.ರ ವಿಶೇಷ ಅಭಿರುಚಿ. ಅವರ ಅಂಕಣಗಳು ಸಾಂದರ್ಭಿಕತೆಯಲ್ಲಿಯೂ ಎದ್ದುನಿಂತು ಸಾರ್ವಕಾಲಿಕ ಗುಣಗಳನ್ನು ಪಡೆದಿವೆ. ಸಮಕಾಲೀನ ಇತಿಹಾಸವಾಗಿಯೂ ಇತಿಹಾಸಪ್ರಜ್ಞೆ (Historical sence— ಎಲಿಯಟ್ ಹೇಳಿದ ಮಾತು) ಯಿಂದ ಮಿನುಗುತ್ತವೆ. ಮಾಸ್ತಿಯವರ 'ಜೀವನ' ಸಂಪಾದಕೀಯಗಳು ಗ್ರಂಥರೂಪದಿಂದ ಬರುವದು ಎಷ್ಟು ಯುಕ್ತ ಮತ್ತು ಅನಿವಾರ್ಯವೋ ಅಷ್ಟೇ ಹಾ. ಮಾ. ನಾರ ಅಂಕಣಗಳು ಗ್ರಂಥವಾಗಿ ಬರುವದು ಯುಕ್ತ ಮತ್ತು ಅನಿವಾರ್ಯ. ಆದಕ್ಕಾಗಿ 'ಸಾಂಪ್ರತ'ವನ್ನು ಸಂತೋಷದಿಂದ ಸ್ವಾಗತಿಸುತ್ತೇನೆ.

ಇಬ್ರಾಹಿಂ ಅಲ್ಕಾಜಿಯವರೊಂದಿಗೆ ಒಂದು ಸಂದರ್ಶನ

ಪ್ರಣಬ್ ಬಸು

ನೀವು NSD ನಿರ್ದೇಶಕರಾಗಿದ್ದಾಗ ಒಂದು ಪರಿಪೂರ್ಣ, ಹೊಸ ರಂಗಭೂಮಿಯ ಚಳುವಳಿಯನ್ನು ಭಾರತದಲ್ಲಿ ಹುಟ್ಟುಹಾಕಿದವರಾಗಿದ್ದೀರಿ. ಅದನ್ನು ಹೇಗೆ ಸಾಧಿಸಿದಿರಿ ?

ತನ್ನ ವಿಚಾರಗಳನ್ನು ಪ್ರಕಟಿಸಲು ಒಬ್ಬ ನಾಟಕಕಾರನಿಗೆ ಒಂದು ರಂಗಭೂಮಿ (Stage) ಮತ್ತು ಒಂದು ನಟವರ್ಗಬೇಕು. ಅಲ್ಲದೆ ತನ್ನ ದೃಷ್ಟಾತ್ಮಕ ಹಂತದಲ್ಲಿ ನಿರ್ಮಿಸುತ್ತಿರುವ ನಾಟಕಗಳನ್ನು ಎತ್ತಿಕೊಳ್ಳಬಲ್ಲ ಜೀವಂತ ರಂಗಭೂಮಿಯೂ ಬೇಕಾಗುತ್ತದೆ. ಒಬ್ಬ ನಾಟಕಕಾರನಿಗೆ ಬೇಕಾದ ಕ್ರಿಯಾಶೀಲ ಚಟುವಟಿಕೆಯುಳ್ಳ ನೆರವನ್ನು ಒದಗಿಸುವುದು ಯಾವುದೇ ರಂಗಭೂಮಿಯ ಕರ್ತವ್ಯವಾಗಿದೆ. ಅಷ್ಟನ್ನೇ ನಾವು NSDಯಲ್ಲಿ ಮಾಡಲು ಯತ್ನಿಸಿದೆವು. ನಾನು NSDಗೆ 1962 ರಲ್ಲಿ ಬಂದಾಗ ಅಲ್ಲಿದ್ದ ಬೋಧಕ ವರ್ಗವು ಸಮಕಾಲೀನ ನಾಟಕವಿಲ್ಲ ಎಂದು ಹೇಳಿತು. ಅಲ್ಲದೆ ಆಗ ಪಾಠಪ್ರವಚನಕ್ಕೆ ದೊರಕುತ್ತಿದ್ದ ನಾಟಕಗಳು ಬಹಳ ಕೆಳಮಟ್ಟದವೆಂದೂ ತಿಳಿಯಿತು. ಅದನ್ನೆಲ್ಲಾ ಬಿಸಾಡಲು ನಾನು ನಿರ್ಧಾರ ಮಾಡಿದೆ.

ಆಗಲೇ ಮೋಹನ್ ರಾಕೇಶ್ ಮತ್ತು ಧರ್ಮವೀರ ಭಾರತಿಯಂಥವರು ಬರೆಯುತ್ತಿದ್ದರು. ಒಮ್ಮೆ ನಾನು ಮೋಹನ್ ರಾಕೇಶ್ ಜೊತೆ ಕುಳಿತು ನೀನು ಹಳೆಯ ಕತೆ ಮತ್ತು ವಿಷಯಗಳನ್ನು ತೆಗೆದುಕೊಂಡು ನಾಟಕ ರಚಿಸುತ್ತಿದ್ದೀಯೆ. ಆ ಹಳೆಯ ವಾತಾವರಣದ ನಿರ್ಮಾಣಕ್ಕಾಗಿ ಹೆಚ್ಚು ಸಂಸ್ಕೃತ ತುಂಬಿದ ಭಾಷೆಯನ್ನು ಬಳಸುತ್ತಿದ್ದೀಯೆ ಇದರಿಂದ ಆ ಪಾತ್ರಗಳ ಮಾತನ್ನು ಗುರುತಿಸಲು ತೊಡಗಿದ್ದೀಯೆ. ಆದರೆ ಸಾಮಾನ್ಯ ಜನತೆಯ ಭಾಷೆಯನ್ನು ಅದೇ ಸಾಮಾನ್ಯ ಮತ್ತು ಸಮಕಾಲಿಕ ಸಂದರ್ಭದಲ್ಲಿ ನಾವು ತಿಳಿದಿರುವಂತೆ ಬಳಸಬಾರದೇಕೆ ? ನಮ್ಮ ದೇಶದ ವಿಚಾರಧಾರೆಯನ್ನು ರೂಪಿಸುತ್ತಿರುವ ನಮ್ಮ ಮಧ್ಯಮ ವರ್ಗವನ್ನು ಕುರಿತು ವಿಚಾರಮಾಡಬಾರದೇಕೆ ?

ಅದೃಷ್ಟವಶಾತ್ ಅವನು ಧೈರ್ಯವಂತನಾಗಿ ಅಂತಹ ಜಾಣ್ಮೆಯುಳ್ಳವನಾಗಿದ್ದರಿಂದ ಒಳ್ಳೆಯದೇ ಆಯಿತು. ಆಗ 'ಆಧೆ ಅಧೂರೆ' ಹುಟ್ಟಿತು. ಇಲ್ಲಿ ಸಾವಧಾನವಾಗಿ ಬೆಳೆದ ಒಬ್ಬ ನಾಟಕಕಾರ ಕಂಡುಬಂದ. ಮುಂದೊಮ್ಮೆ ನಾನು ಆರಿಸಿದ "ಆಷಾಡ್ ಕಾ ಏಕ್ ದಿನ್" ಪ್ರದರ್ಶನದಿಂದ ರೋಮಾಂಚನಗೊಂಡೆ. ಅದನ್ನು ಅನೇಕ ವಿಶ್ವವಿದ್ಯಾಲಯಗಳಲ್ಲಿ ಓದಿದ್ದಾಯಿತು. ಆದರ ಪ್ರತಿಗಳು ವಿಶೇಷ ಖರ್ಚಾದವು. ಇದರಿಂದ ಹೆಣಗಾಡುತ್ತಿದ್ದ ಒಬ್ಬ ಪತ್ರಿಕೋದ್ಯಮಿಗೆ 'ಬದುಕಲು' ಸಾಧ್ಯವಾಯಿತು, ಅಲ್ಲದೆ

ಅವನ ಕ್ರಿಯಾವಂತಿಕೆಗೆ ತಳಹದಿ ಹಾಕಿದಂತಾಯಿತು. ಅವನು ಒಬ್ಬ ನಾಟಕಕಾರ ನಾಗಲೂ ಸಾಧ್ಯವಾಯಿತು. ನನಗೆ ಅನ್ನಿಸಿದಂತೆ ಅವನೊಬ್ಬ ತುಂಬ ಬುದ್ಧಿವಂತ ಸೂಕ್ಷ್ಮ ಸ್ವಭಾವದ ನಾಟಕಕಾರ. ಅದೇ ಧರಮ್‌ವೀರ್ ಭಾರತಿಯ ಜೊತೆ ಇದು 'ಅಂಧಯುಗ್' ಕೃತಿಯ ನಂತರ ಸಾಗಲು ಸಾಧ್ಯವಾಗಲಿಲ್ಲ.

ಆಮೇಲೆ ವಿಜಯ ತೆಂಡೂಲ್ಕರ್, ಬಲವಂತ್ ಗಾರ್ಗಿ, ಕಾಣೇಕರ್, ನಮ್ಮ ಗೆಳೆಯ ಬಾದಲ್ ಸರ್ಕಾರ್, ಅಲ್ಲದೆ ಗಿರೀಶ್ ಕಾರ್ನಾಡ್ ಜೇರೆ. ಹೀಗೆ, ಇಂತಹ ಕ್ರಿಯಾಶೀಲತೆಗೆ ತಳಹದಿ ಮೆಟ್ಟಿದಂತಾಯಿತು ಅಲ್ಲದೆ ಆಗ NSD ಯಲ್ಲಿ ಸಾಧಿಸಿದ ಅನುವಾದಗಳಿಂದ ಮರಾಠಿ ಮೂಲಕೃತಿಯೊಂದು ಕೂಡಲೆ ಹಿಂದಿಗೆ ಬರುತ್ತಿತ್ತು. ಆದರಿಂದ ಓದುಗರೂ ಹೆಚ್ಚಾಗುತ್ತಿದ್ದರು, ಪ್ರೇಕ್ಷಕರು ಹೆಚ್ಚಾದರು. ಸತ್ಯಜಿತ್‌ರಾಯ್ ಭಾಷೆಯ ಮಿತಿಯಿಂದಾಗಿ ಯಾವುದನ್ನು ಸಾಧಿಸಲು ಆಗದೇ ಹೋಗಿತ್ತೋ ಅದನ್ನೆಲ್ಲಾ ನಾವು ಸಾಧಿಸಲಾಯಿತು. ನಂತರ ನಮ್ಮ ಸಾಂಪ್ರದಾಯಿಕ 'ರಂಗಮಂಚ'ದ ಕಡೆ ತಿರುಗಿ ಆದರಲ್ಲಿ ಹೆಚ್ಚಿನ ಜೀವಂತತನ, ಆಳ ಮತ್ತು ವ್ಯಾಪಕ ವಸ್ತುವನ್ನು ಕೂಡಿಸಲು ಸಾಧ್ಯವಾಯಿತು.

ದಕ್ಷಿಣ ಭಾರತದ ರಂಗಭೂಮಿಯ ವಿಷಯವೇನು ಹೇಳಿ ?

ನಾನು ಸಮ್ಮತ ಹೇಳಲೇಬೇಕು, ನೋಡಿ ಕೆಲವು ಕನ್ನಡ ನಾಟಕಗಳನ್ನು ಬಿಟ್ಟರೆ ನನಗೆ ಹೆಚ್ಚಿಗೇನೂ ತಿಳಿದಿಲ್ಲ. ಆದೂ ವಿಶೇಷವಾಗಿ ಗಿರೀಶ್ ಕಾರ್ನಾಡ್, ಬಿ. ವಿ. ಕಾರಂತ, ಪ್ರಸನ್ನ ಮತ್ತು ಇತರ NSD ವಿದ್ಯಾರ್ಥಿಗಳಿಂದ ತಿಳಿದದ್ದಷ್ಟೇ. ಆದರೆ NSD ಯಿಂದ ಪಾಸಾದವರು ತಮಿಳುನಾಡಿನಲ್ಲಿ, ಏನೂ ಮಾಡಿರಲಾರರು. ಅಲ್ಲೇನೂ ನಿಶ್ಚಿತ ಕಾರ್ಯವಾದಂತೆ ಕೇಳಿಲ್ಲ.

ಭಾರತದಲ್ಲಿ ಇಂಗ್ಲಿಷ್ ರಂಗಭೂಮಿಯ ಸಾಧ್ಯತೆಯೇನೆನ್ನುತ್ತೀರಿ ?

ಆದೂ ಇದ್ದೀತುನೋಡಿ, ಆದನ್ನ ಒಂದು ಬಗೆಯಲ್ಲಿ ಹವ್ಯಾಸಿ ಚಟುವಟಿಕೆ ಎನ್ನಬಹುದು. ಅಲ್ಲೂ ಜನರಿದ್ದಾರೆ ಆದರೆ ಅಷ್ಟರಿಂದ ಭಾರತೀಯ ರಂಗಭೂಮಿಯ ಮೇಲೆ ಯಾವುದೇ ಪರಿಣಾಮವೂ ಆಗಲಾರದು. ಅದು ಏನೂ ಮಾಡಲಾರದು. ಕೇವಲ ಮೇಲಿನ ಮಧ್ಯಮ ವರ್ಗದ ಕೆಲವೇ ಜನಗಳ ಮೇಲೆ ಏನಾದರೂ ಪರಿಣಾಮ ವಾದೀತು ಅಷ್ಟೆ. ಅಲ್ಲದೆ ಆ ವರ್ಗದ ಅಂತರ ಕೂಡ ಇದೆ. ಸಾಮಾನ್ಯ ಮನುಷ್ಯ ನೊಬ್ಬ 'ಲಾಂಗ್ ಡೇಸ್ ಜರ್ನಿ ಇಂಟು ದಿ ನೈಟ್'ನಂತಹ ನಾಟಕವನ್ನು ನೋಡ ಬೇಕಾಗಿರುವುದೇ ಇಲ್ಲ. ಅಲ್ಲವೆ ?

ನಾನು ನಾಟಕ ಆಡಿಸುವಾಗ ಕಂಡ ಒಂದು ಅಂಶ ಇದು. ಉದಾಹರಣೆ, ಆಷಾಢ್ ಕಾ ಏಕ್ ದಿನ್ ಅಥವಾ ಅಂಧಯುಗ್ ಇವುಗಳನ್ನು ನಮ್ಮ ಜನ ಕೇವಲ ರೇಡಿಯೋ ನಾಟಕಗಳಿಂದು, ಒಂದು ಬಗೆಯ 'ಸೋತ ರೇಡಿಯೋ ನಾಟಕಗಳ

ಎಂಬೂ ತಿಳಿಹಾಕಿದ್ದರು. ಫಿರೋಜ್ ಷಾ ಕೋಟ್ಲಾ ಅಂಗಳದಲ್ಲಿ ನಾನು 'ಅಂಧ ಯುಗ್' ಆಡಿಸಿದೆ. ಅದೂ ಒಂದು ನೂರು ಅಡಿ ವಿಸ್ತಾರದ ರಂಗದ ಮೇಲೆ. ಅಲ್ಲಿ ಆ ನಾಟಕಕ್ಕೆ ಮೊಟ್ಟಮೊದಲ ಸಲ ಮಹಾಕಾವ್ಯದ ಚೌಕಟ್ಟನ್ನು ರೂಪಿಸಲು ಸಾಧ್ಯ ವಾಯಿತು. ಆಗ ಅದು ಮಹಾಭಾರತವನ್ನು ಕುರಿತ ನಾಟಕ. ಅಂತಹ ಒಂದನ್ನು ಈ ಜನಕ್ಕೆ ಆಡಿಸಿ ತೋರುವಲ್ಲಿ ನಾನು ಜನಸಾಮಾನ್ಯರ ಕಲ್ಪನೆಯನ್ನು ಸೆರೆಹಿಡಿದೆನೆಂಬ ಅರಿವು ಮೂಡಿ ಬಂತು.

ನೀವು ಮೂರು ಬೇರೆ ಬೇರೆ ಪ್ರಯೋಗಗಳನ್ನು ಗಿರೀಶ್‌ಕಾರ್ನಾಡರ 'ತುಘಲಕ್'ನ್ನು ಕುರಿತೆ ಮಾಡಿದಿರೆಂದಮೇಲೆ, ಯಾರಾದರೇನಂತೆ ಇದೊಂದು ನಿಮ್ಮ ಬಹುಮುಖ್ಯ ಪ್ರದರ್ಶನವೆನ್ನುತ್ತಾರೆ.

ನನಗೆ 'ತುಘಲಕ್' ಪ್ರಯೋಗಗಳು ಅಷ್ಟೊಂದು ಮುಖ್ಯವೆಂದು ಅನ್ನಿಸುವುದಿಲ್ಲ. ಅದೇ 'ಅಂಧಯುಗ್' ಅಂಥದೆನ್ನುತ್ತೇನೆ. ಒಂದು ರೀತಿಯಲ್ಲಿ ಪ್ರೇಮಚಂದರ 'ಗೋದಾನ್' (ನಾನು ಅದನ್ನು 'ಹೋರಿ' ಎಂದು ಕರೆದೆ) ಅದು ನನ್ನ ವಿದ್ಯಾರ್ಥಿಗಳು ಆಯ್ದುಕೊಂಡದ್ದು. ಅದೇ ನನ್ನ ತುಂಬ ಮೆಚ್ಚಿಗೆಯ ಪ್ರದರ್ಶನ ಎನ್ನಿ. ಅಂಥ ನಾಟಕಗಳು ನಮ್ಮ ರೈತನ ಜೀವನಕ್ಕೆ ಸೇರಿದಂಥವು. ಒಂದು ಕಡೆ ಸಾಮಾನ್ಯನ ಸಮಸ್ಯೆಗಳು ಮತ್ತು ಭಾರತೀಯರ ಪೌರಾಣಿಕ ಕಲ್ಪನೆಯನ್ನು ಒಳಗೊಂಡ ನಾಟಕ ಗಳು. ರಾಮಾಯಣ, ಮಹಾಭಾರತ ಇವು ಭಾರತೀಯರ ಸುಪ್ತ ಮನಸ್ಸಿನಲ್ಲಿ ರೂಪ ತಾಳಿದಂಥವು. ಅಂಥವನ್ನೇ ನಾನು ರೂಪಕಗೊಳಿಸಲು ಪ್ರಯತ್ನ ಮಾಡಿದೆ. ಏಕೆಂದರೆ ಆ ನೀತಿ–ರೂಪಕ (ಪ್ಯಾರಲಲ್ಸ್)ಗಳಲ್ಲಿ, ಅಂಥ ಕಥೆಗಳಲ್ಲಿ, ಅದರಲ್ಲೂ ಮಹಾಭಾರತ ದಲ್ಲಿ ನಮ್ಮ ಇಪ್ಪತ್ತನೇ ಶತಮಾನದ ಸಮಸ್ಯೆಗಳೆಲ್ಲಾ ಕಂಡುಬರುತ್ತವೆ.

ಆದರೆ 'ತುಘಲಕ್' ನಾಟಕದ ಅಷ್ಟೊಂದು ಪ್ರಯೋಗಗಳನ್ನೇಕೆ ಮಾಡಿದಿರಿ ?

ಹಾಗನ್ನಬೇಡಿ, 'ತುಘಲಕ್' ಪ್ರಯೋಗಗಳನ್ನು ಅಷ್ಟೊಂದು ಮಾಡಿದವನಲ್ಲ. ಒಮ್ಮೆ ಅಂಥ ಆಸೆ ಪಟ್ಟಿದ್ದೆ, ಆದರೆ ಅದನ್ನು ನನ್ನ ಒಬ್ಬ ವಿದ್ಯಾರ್ಥಿ ಮಾಡಿದರು, ಓಂ ಶಿವಪುರಿ. ನೋಡಿ 'ತುಘಲಕ್' ಇದೆಯಲ್ಲಾ ಅದು ಒಬ್ಬ ದೊಡ್ಡ ನಟನಿಗೆ ಸಾಧ್ಯ ವಾಗುವಂಥದು. ಶಿವಪುರಿ ಅಂಥ ತುಂಬ ಒಳ್ಳೆಯ ನಟ.

ಆದರೆ ಅದು ಒಬ್ಬ ಕಲಾವಿದನ ಸಾಮರ್ಥ್ಯಕ್ಕೂ ಮೀರಿದ ಒಂದು ಕೃತಿ. ಈಗಿನ ಸಂದರ್ಭದಲ್ಲಿ ಕೂಡ ಅದೊಂದು ಮಹತ್ವದ ಸಮರ್ಥ ರಾಜಕೀಯ ನಾಟಕ. ನಾವು 'ತುಘಲಕ್' ನಾಟಕವನ್ನು ಅರ್ಥಮಾಡಿಕೊಳ್ಳಬೇಕು. ಮೊದಲಿಗೆ ಅವನೊಬ್ಬ ದೆಹಲಿಗೆ ಸೇರಿದ ಪಾತ್ರ. ಅವನಿಗೆ 'ಇಡೀ ಭಾರತ'ವನ್ನು ನೋಡುವ ಸಾಮರ್ಥ್ಯ ಇತ್ತು. ನಾವು ಅಂದುಕೊಳ್ಳುವ ಅನೇಕ ಏಕತಾ ಭಾವಗಳಿಗೆ, ಕೇವಲ ಉಪಚಾರ

ಮಾಡುವಂಥ ಭಾವಗಳಿಗೆ, ಇದರಲ್ಲಿ ಸರಿಯಾದ ಅವಕಾಶವಿದೆ. ಅಂಥವನ್ನು ನಾವು
ಇಂದಿಗೂ ಸಾಧಿಸಲಾರೆವು. ಭಾರತದ ವಿಭಜನೆಗೆ ದಾರಿಮಾಡಿಕೊಟ್ಟ ವಿಚಾರಗಳು
ನಮ್ಮನಮ್ಮಲ್ಲೇ ಕಾಣುತ್ತಿರುವ ಒಡಕುಗಳು, ಇವೆಲ್ಲಾ ಅಲ್ಲಿವೆ.

ಈ ಸಮಾಜದ ನೀತಿಯಲ್ಲಿ ಒಂದಂತೂ ಸರಿಯೆ. ಬರಿಯ ದೊಡ್ಡ ಆದರ್ಶ
ಗಳನ್ನು ಕಂಡಿದ್ದರೇ ಸಾಲದು–ದೊಡ್ಡ ಕಾಣ್ಕೆಯೂ ಸಾಲದು. ಅದೇ ವಿಚಾರಗಳನ್ನು
ನಮ್ಮ ಜನತೆಗೆ ಮುಟ್ಟಿಸಬೇಕಾದುದು ಅಗತ್ಯ. ಏಕೆಂದರೆ ಅದನ್ನೆಲ್ಲಾ ಅವರೇ
ಸಾಧಿಸಿಕೊಳ್ಳಬೇಕಾದವರಾಗಿದ್ದಾರೆ. ಅಂಥವನೇ ಸಾಮಾನ್ಯ ಮನುಷ್ಯ ನೋಡಿ.
ಹಾಗೆ ನೀವು ಅತಿರೇಕಗಳ ಒಂದು ಸಮೂಹಕ್ಕೆ, ಒಂದು ಸಮಯ ಸಾಧಕರ ವರ್ಗಕ್ಕೆ,
ಹಾದಿ ಮಾಡಿಕೊಡುತ್ತೀರಿ. ಅಂಥವರೇ ನೋಡಿ ನಮ್ಮ ಇತಿಹಾಸವನ್ನು ಹಳಿಯುವ
ವರಿದ್ದಾರೆ. ಆದ್ದರಿಂದ ಈ ನಾಟಕದಲ್ಲಿ ಯಾವುದು ಮುಖ್ಯವೆಂದರೆ ಇಂಥದೆಲ್ಲದರ
ಪೂರ್ಣ ಚಿತ್ರಣ ಮತ್ತು ಅಜೀಜನ ಜೀವನದಲ್ಲಿ ಪ್ರಕಟವಾಗುವ ತುಘಲಕನ ಆದರ್ಶ
ಗಳ ಗೇಲಿ. ನಾಟಕದುದ್ದಕ್ಕೂ ಆಜೀಜನು ತುಘಲಕನಿಗೆ ದುಂಬಾಲು ಬಿದ್ದ ಅವನ
ನೆರಳು, ಒಂದು ಬಗೆಯ ಅವನ ಬದಲು–ಅಹಂಕಾರ–ತನ್ನ ಕೊನೆಯ ದಿನಗಳಲ್ಲಿನ್ನು
ವಂತೆ ತುಘಲಕನು ಎದುರಿಸಬೇಕಾದ ಆ ನೆರಳು. ಆಗಲೇ ಅವನು ತನ್ನ ಮಹಾ
ಸೋಲನ್ನು ಗುರುತಿಸುತ್ತಾನೆ. ತನ್ನ ಸಾಧನೆಯೆಲ್ಲಾ ಎಷ್ಟು ಭಯಂಕರವಾದುದೆಂಬ
ದನ್ನು ಅರಿಯುತ್ತಾನೆ.

ನಮ್ಮೆಲ್ಲರ ಒಂದು ಅನುಭವವೆಂದರೆ, ಒಂದು ಸಮಾನಾಂತರ ಸಂದರ್ಭವೆಂದ
ಬೇಕಾದರೂ ಅನ್ನಬಹುದು, ದೇಶದ ವಿಭಜನೆಯ ನಂತರದ ಅತ್ಯಂತ ಭಯಾನಕ ಪ
ಸ್ಥಿತಿ. ರಾಜಕೀಯ ಆದರ್ಶಗಳನ್ನು ನಾವೆಲ್ಲಾ ಇರಿಸಿಕೊಂಡಿರಬಹುದು ; ಮಾನ
ಶಕ್ತಿ ಮತ್ತು ಹೃದಯಗಳ ದೊಡ್ಡತನದಲ್ಲಿ ಹೆಚ್ಚಿನ ವಿಶ್ವಾಸವಿರಿಸಿಕೊಳ್ಳುವುದಂತ
ಸರಿಯೆ. ಆದರೆ ಜನತೆಯ ಸಾಮೂಹಿಕ ವಿನಿಮಯದಲ್ಲಿ ನೀವು ರಾಜಕೀಯ ವಿವ
ಗಳನ್ನು ಸರಿಯಾಗಿ ಯೋಜಿಸಿ ಕಾರ್ಯಗತ ಮಾಡಲಾರದೆ ಹತ್ತಾರು ಸಾವಿರ ಸಂಸಾ
ಗಳ ಮೇಲೆ ಎಂಥ ಭಯಂಕರ ಪರಿಣಾಮವಾದೀತೆಂಬುದನ್ನು ಕಾಣದೇಹೋದದ್ದ
ಅತ್ಯಂತ ಅಪಾಯಕಾರಿ ಎನ್ನಬೇಕಾಗುತ್ತದೆ. ಇದೇ ದುರದೃಷ್ಟವಶಾತ್, ನಮ
ಸ್ವಾತಂತ್ರ್ಯ ಬಂದಾಗಿನಿಂದಲೂ ಮತ್ತೆಮತ್ತೆ ಜರುಗುತ್ತಿರುವ ಘಟನೆಯೂ ಆಗಿದೆ.

**ವಸ್ತುತಃ ತುಘಲಕ್ ಒಂದು ಸಾಮಾಜಿಕ ವಿಶ್ಲೇಷಣೆಯ ಅವಿಭಾ
ವಾಗಿದೆಯಲ್ಲವೆ ?**

ಖಂಡಿತ ಹೌದು. ನಮ್ಮ ಸಮಕಾಲಿಕತೆಗೆ ಒಂದು ಮಹತ್ವಪೂರ್ಣ ಅ
ವಂತಿಕೆಯನ್ನು ಒಳಗೊಳ್ಳುವ ವಸ್ತುವಿನ ನಿರೂಪಣೆಯೇ ಆಗಿಬಿಟ್ಟಿದೆ. ಅದು,
ದಿನಕ್ಕೆ ಅರ್ಥಪೂರ್ಣವಾಗುವಂಥ ಒಂದು ಐತಿಹಾಸಿಕ ಪಾತ್ರದ ಮೂಲಕವಾಗಿ
ಅವನು ನಮ್ಮ ಇಂದಿನವರೆಗೂ ಒಂದು ಸಮಾನಾಂತರ ರೂಪವಾಗಿ ಬಿಡುತ್ತಾ

ಉದಾ.ಗೆ ನೆಹರು ನಂತರ ತುಘಲಕ್. ತುಘಲಕ್ ನಾಟಕದಲ್ಲಿ ನಜೀಬನಂಥವನನ್ನು ಬಿಟ್ಟರೆ, ಅವನನ್ನು ಬಳಸಿ ನಿಂತ ಪಾತ್ರಗಳೆಲ್ಲಾ 'ಸೊನ್ನೆಗಳೇ' ನೋಡಿ. ಅವರಲ್ಲೂ ಒಬ್ಬ ಮಾತ್ರ–ಬರ್ನಿ, ಒಂದು ಬಗೆಯ ಇತಿಹಾಸಕಾರನಾದವನು, ಮತ್ತು ಒಟ್ಟಂದದ ವ್ಯಕ್ತಿ ಮಾತ್ರ. ಅವನು ಕೊಂಚ ದೂರದಿಂದ ಈ ಘಟನೆಗಳನ್ನೆಲ್ಲಾ ವಸ್ತುನಿಷ್ಠೆಯಿಂದ ನೋಡಬಲ್ಲವನಾಗಿ ತನ್ನ ಟೀಕೆಯನ್ನು ಮಂಡಿಸುವವನಾಗಬೇಕಿತ್ತು. ಮೊದಲ ಭಾಗದಲ್ಲಿ ತುಘಲಕ್‌ನ ಆಳ್ವಿಕೆಯಲ್ಲಿ ಭಾರತದ ಭವಿಷ್ಯದ ಬಗ್ಗೆ ಒಳ್ಳೆಯ ಆಸೆಗಳನ್ನಿರಿಸಿಕೊಂಡಿದ್ದವನು ಅವನು. ಕೊನೆಗೆ ಆತನು ಸಂಪೂರ್ಣವಾಗಿ ನಿರಾಶೆಯಿಂದ ಕೂಡುತ್ತಾನೆ. ಆದ್ದರಿಂದ ತುಘಲಕ್‌ನನ್ನು ಬಿಟ್ಟು ಹಿಂದಿರುಗಲು ನಿರ್ಧರಿಸುತ್ತಾನೆ.

ನಿಮಗೆ ಬರ್ನಿಯನ್ನು ತರ್ಕಬದ್ಧವಾಗಿ ಗುರುತಿಸಲು ಸಾಧ್ಯವಾಗಿದೆಯೇ ?

ನನಗೆ ಬರ್ನಿ ಒಬ್ಬ ತುಚ್ಛ ಮತ್ತು ನಿಷ್ಕ್ರಿಯನಾದಂತ ಪಾತ್ರ. ಈ ದಿನಗಳಲ್ಲಿ ನಿರಾಶೆಯಲ್ಲಿ ಮುಳುಗಿದ ಮತ್ತು ಸಿಟ್ಟಿಗೆದ್ದವನೊಡನೆ ಆತನನ್ನು ಗುರುತಿಸಬೇಕಾದೀತು. ಅವನು, ತನ್ನ ದೇಶಕ್ಕೆ ಏನಾದರೂ ಪ್ರಯೋಜನಕಾರಿಯಾಗುವ ವಿದ್ಯಾವಂತನಾಗಿ, ಆದರ್ಶ ಪ್ರಜ್ಞೆಯಿಂದ ದುಡಿಯುವವನಾಗಿ, ದುಡಿಮೆಯ ಪ್ರತಿಫಲಾಪೇಕ್ಷೆಯಿಲ್ಲದವನಾಗಿರಬೇಕು. ಆಗ ಮಾತ್ರ ನೀವು ಅವನ ನಿರಾಶೆಯನ್ನು ಕಾಣಬಲ್ಲಿರಿ. ಏಕೆಂದರೆ ನಮ್ಮ ದೇಶದ ಇಡೀ ಪರಿಸ್ಥಿತಿಯಲ್ಲಿ, ಒಂದು ಅತ್ಯದ್ಭುತವೆನ್ನಬಹುದಾದ, ಒಂದು ರಾಜಕೀಯ ನಿಷ್ಕ್ರಿಯನಾದಂತ ವರ್ಗದಿಂದ ತುಂಬಿಹೋಗಿದೆ. ನೀವು ಜನರನ್ನು ತಮ್ಮ ಕಾರ್ಯದಲ್ಲಿ ತೊಡಗುವಿಕೆಯಿಂದ ಗುರುತಿಸುತ್ತೀರಿ.

ಪ್ರಸನ್ನರ 'ತುಘಲಕ್' ಬಗ್ಗೆ ನಿಮ್ಮ ಅಭಿಪ್ರಾಯವೇನು ?

ನನಗೇನೂ ಗೊತ್ತಿಲ್ಲದ್ದನ್ನೇ ಕೇಳುತ್ತಿದ್ದೀರಿ. ದಯವಿಟ್ಟು ಇದನ್ನು ಒಪ್ಪಿ, ಅಂಥದೇನೋ ಸುದ್ದಿ ಹರಡಿದೆ. ನನಗಂತೂ ಅವರ ಪ್ರಯೋಗವನ್ನು ನೋಡಲಾಗಿರುವುದಿಲ್ಲ. ಅದರ ಬಗ್ಗೆ ಯಾವುದೇ ತೀರ್ಪನ್ನು ನಾನೀಗ ಕೊಡಲಾರೆ. ಅಲ್ಲದೆ ಅದಕ್ಕೂ ನನಗೂ ಯಾವ ಸಂಬಂಧವೂ ಇರುವುದಿಲ್ಲ. ನಾನು ಬಂದು ನನ್ನ ಮುಂಚಿನ ಪ್ರದರ್ಶನವನ್ನು ತಿದ್ದಬೇಕೆಂದರು. ನನ್ನ ಕಸುಬಿನ ಸಾಮರ್ಥ್ಯದಿಂದ ಅಷ್ಟು ಮಾಡಿದೆ.

ಇಂದಿನ ರಾಜಕೀಯ ಪರಿಸ್ಥಿತಿಗೆ ನೀವೇನೆನ್ನುವಿರಿ ?

ತುಂಬಾ ನಿರಾಶಾದಾಯಕ ಆಷ್ಟೆ. ಪ್ರತಿಭೆಯನ್ನು ರಸ್ತೆಯ ಬದಿಗೆ ಒಗೆದಿದ್ದಾರೆ. ತಿಕ್ಕಲುಮಂದಿಯನ್ನು ಗದ್ದುಗೆ ಮೇಲೇರಿಸಿದ್ದಾಗಿದೆ. ಹೊಟ್ಟೆಗಿಲ್ಲದ ಸಾಮಾನ್ಯ ಪ್ರಜೆಯನ್ನು ಕೇಳುವವರೇ ಇಲ್ಲ. ಹೀಗಿರುವಾಗ ಕೆರಳದವರನ್ನೆಲ್ಲಿಪೇ

ಬೇರೇನು ಕಂಡುಬಂದೀತು, ಹೇಳಿ. ಅಷ್ಟೊಂದು ನಿರಾಶೆಯೆಂದು ಹೇಳಲಾರೆ. ಇಂ
ಬಿಟ್ಟನಿಂದ ಗಟ್ಟಿಯಾದದ್ದು ಏನೋ ಒಂದು ಹುಟ್ಟೀತು. ಜನಗಳೇ ಹೊಸ ವಿಚಾ
ಗಳನ್ನು ತೆಗೆಯುತ್ತಾರೆ. ವಿಚಾರಗಳ ಹೋರಾಟವನ್ನೇ ನಾವು ಬೆಳಕಿಗೊಡ್ಡ ಬೇಕ
ಗಿದೆ. ಯಾರೇ ಆಗಲಿ ವಿಚಾರವನ್ನು ಎತ್ತಿ ಹಿಡಿಯಬೇಕು. ಈಗ ಆಗುತ್ತಿರುವುದನ್ನ
ತೋರಿಸುವುದಲ್ಲ. ಉದಾ.ಗೆ, ಜವಾಹರಲಾಲ್‌ನೆಹರೂ ವಿಶ್ವವಿದ್ಯಾಲಯದ
ಬಂದ 'ಮಹಾಭೋಜ' ಎಂಬ ನಾಟಕ. ಅದೊಂದು ಮುಖ್ಯ ನಾಟಕ. ನಮ
ಜನತೆಯನ್ನು ಎಚ್ಚರಿಸುವುದಕ್ಕೆ ಇದೊಂದು ಹೊಸ ಬಗೆ, ಮತ್ತು ಇದು ನಮ
ಸರ್ಕಾರಕ್ಕೂ ಆದೀತು, ನೋಡಿ.

ಒಂದು ವಿಚಾರವಾದದಿಂದ ಪ್ರತಿಭೆಯ ವಿಕಾಸಕ್ಕೆ ಅಡ್ಡಿಯಾದೀತು. ಎನ್ನುವಿರಾ ?

ಮಾರ್ಕ್ಸ್‌ವಾದವನ್ನು ಅರ್ಥಮಾಡಿಕೊಳ್ಳದೇ ಈ ಆಧುನಿಕ ಪ್ರಪಂಚವನ್ನು ಅರ್ಥಮಾಡಿಕೊಳ್ಳಬಹುದೆಂದು ನನಗನ್ನಿಸುವುದಿಲ್ಲ. ಎಲ್ಲಕ್ಕೂ ಮೊದಲು ನಾನ ಕಲಿತ ಪಾಠ ಇದು. ವಿಚಾರವಾದವನ್ನು ಓದಿಕೊಂಡುದರಿಂದ ಅಲ್ಲ; ಭಾರತೀಯ ಪರಿಸ್ಥಿತಿಯನ್ನು ಕಣ್ಣು ತೆರೆದು ನೋಡಿದುದರ ಫಲ ಇದು. ನಾಟಕದ ಅರ್ಥವಂ ಕೆಯು ಮನೋರಂಜನೆಯನ್ನು ಮೀರಿದ ಒಂದು ಬಗೆಯಾಗಿದೆ ; ಅದಕ್ಕಿಂತಲೂ ಬಹ ಹೆಚ್ಚಿನ ಅರ್ಥವಂತಿಕೆಯಾಗಿದೆ. ಆ ವಿಚಾರದಲ್ಲಿ ಬ್ರೆಕ್ಟ್ ನನ್ನ ಪರಮ ಗುರು. ನನ ಮೇಲೆ ಯಾರೇ ಆಗಲಿ ಪ್ರಚಂಡ ಪ್ರಭಾವವಿರುವುದಾದರೆ ಅದು ಪಾಶ್ಚಿಮಾತ್ಯ ರಂ ಭೂಮಿಯಿಂದಲ್ಲ; ನನ್ನ ಕಾರ್ಯ ಸಾಧನೆಯ ಬಗ್ಗೆ ಅಂಥ ಅರ್ಥಹೀನ ಬರಹ ಸಾ ಕ್ಷಿದೆ; ಅದು ಖಂಡಿತವಾಗಿ ಬ್ರೆಕ್ಟ್ ಮತ್ತು ರಂಗಭೂಮಿಯ ಬಗ್ಗೆ ಅವನ ವಿಚಾರಧಾ ನನ್ನ ಮೇಲೆ ಪ್ರಭಾವ ಬೀರಿದೆ.

ನೀವು ನ್ಯಾಷನಲ್ ಸ್ಕೂಲ್ ಅಫ್ ಡ್ರಾಮಾ ಸಂಸ್ಥೆಯನ್ನು 197 ರಲ್ಲಿ ಬಿಟ್ಟರಿ. ನಂತರ ಸುಮಾರು ಹದಿನೇಳು ವರ್ಷಗಳಾಗಿವೆ. ನೀವು ಚಿತ್ರ ಕಲೆಯನ್ನು ಹಚ್ಚಿಕೊಂಡಿದ್ದೀರಿ ಮತ್ತು ಒಂದು ಕಲಾಭವನವನ್ನು ಸ್ಥಾ ಸಿದ್ದೀರಿ. ನಿಮ್ಮ ಈ ಹೊಸ ಕಸಬು ಹೇಗೆನ್ನಿಸಿದೆ ?

ನಾನು ನಡೆಸಿದ ಯಾವುದೇ ರಂಗಪ್ರಯೋಗದಷ್ಟೇ ಕುತೂಹಲಭರಿತ ಮತ್ತು ರೋಮಾಂಚಕಾರಿಯಾಗಿದೆ. ಈಗಂತೂ ಕಲೆಯ ಒಂದು ಚಳುವಳಿಗೆ ಸೇರಿ ಹೋ ದ್ದೇನೆ. ಅದರಲ್ಲಿ ನಾನೂ ಒಬ್ಬ ಚಿತ್ರಕಾರ. ಜೊತೆಗೆ ನನ್ನ ಆತ್ಮೀಯ ಗೆಳೆಯರೂ ಇದ್ದಾರೆ. ಶ್ರೀಗಳು ಕ್ರೇಲ್ ಮೆಹತಾ, ಹುಸೇನ್, ಅಕ್ಬರ್ ಪದಂಸೀ, ಎಫ್.ಎನ್ ಸೋಜಾ ಮತ್ತು ನಾನು ಜೊತೆ ಜೊತೆಗೇ ಬೆಳೆದಿದ್ದೇವೆ. ಒಟ್ಟಿಗೆ ವಾಸಮಾಡಿದ್ದೂ ಉಂಟು, ನಾವೆಲ್ಲರೂ ಹಲವು ಅನುಭವಗಳನ್ನು ಹಂಚಿಕೊಂಡಿದ್ದೇವೆ.

ನಾನು ಮುಂಬಯಿಯಲ್ಲಿದ್ದಾಗ, ಇತ್ತೀಚೆಗೆ, ಹಲವಾರು ಪ್ರದರ್ಶನಗಳನ್ನು ಏರ್ಪಡಿಸಿದ್ದೆ. ನಮ್ಮ ಸಮಕಾಲಿಕ ಭಾರತೀಯನಿಗೆ ನಮ್ಮ ಸಮಕಾಲಿಕ ಕಲಾವಿದರನ್ನು ಪರಿಚಯ ಮಾಡಿಕೊಡುವ ಪ್ರಯತ್ನ ಮಾಡಿದೆ. ಆದ್ದರಿಂದ ನಾನು ಹೆಸರಾದೆ. ರಂಗಭೂಮಿಯ ದೃಷ್ಟಾಂತ್ಯಾತ್ಮಕತೆಯು ಒಂದು ಬಗೆಯಷ್ಟೆ. ರಂಗಭೂಮಿಯಲ್ಲಿ ಒಂದು ನಿಶ್ಚಿತ ರೂಪದ ಶಕ್ತಿಯಿದೆ; ಕ್ರಿಯಾವಂತಿಕೆಯಿದೆ. ಯಾಕೆಂದರೆ ಅದು ಒಂದು ಜೀವಂತ ಅನುಭವ. ಅದನ್ನು ಜೀವಂತ ಪ್ರೇಕ್ಷಕರ ಮುಂದೆ ಪ್ರದರ್ಶಿಸಲಾಗುತ್ತದೆ. ಅದಕ್ಕೆ ಕೂಡಲೇ ಪ್ರತಿಕ್ರಿಯೆ ದೊರಕುತ್ತದೆ, ಇತ್ಯಾದಿ. ಆದರೆ ಅಂಥದೇ ವಿಚಾರವನ್ನು ಚಿತ್ರಕಲೆಯ ಬಗ್ಗೆಯೂ ಹೇಳಲು ಅವಕಾಶವಿದೆ. ಸಮರ್ಥವಾದ ಚಿತ್ರಗಳಿಗೆ ಅಂಥ ಒಳ್ಳೆಯ ಕಾಲ ಬಂದೀತು ಮತ್ತು ಜೀವಂತ ಪ್ರತಿಕ್ರಿಯೆಯನ್ನು ಪ್ರೇಕ್ಷಕರಿಂದ ಕಾಣಬಹುದು ಅನ್ನಿಸಿದೆ.

ಕೃಪೆ: 'ದಿ ಸಂಡೇ ಅಬ್ಸರ್ವರ್', ಜೂನ್ 83
ಕನ್ನಡಕ್ಕೆ: ಕ. ವೆಂ. ರಾಜಗೋಪಾಲ

'ಅಂಕಣ'ದ ಹಳೆಯ ಸಂಚಿಕೆಗಳು

'ಅಂಕಣ' ಮೊದಲ ಸಂಚಿಕೆಯಿಂದ 1983ರ ವರೆಗಿನ ಸಂಚಿಕೆಗಳನ್ನು ಒಂದು ಸಂಪುಟವನ್ನಾಗಿ ಸಿದ್ಧಪಡಿಸಲಾಗಿದೆ. ಆಸಕ್ತಿಯುಳ್ಳ 'ಅಂಕಣ' ಓದುಗರು 30–00 ರೂಪಾಯಿಗಳನ್ನು ಮುಂಗಡವಾಗಿ ಕಳುಹಿಸಿದರೆ ಅವರಿಗೆ ಈ ಸಂಪುಟಗಳನ್ನು ಕಳುಹಿಸಲಾಗುವುದು. ಕೆಲವೇ ಪ್ರತಿಗಳಿರುವುದರಿಂದ ಮೊದಲು ಹಣ ಕಳುಹಿಸಿದವರಿಗೆ ಆದ್ಯತೆಯನ್ನು ನೀಡಲಾಗುವುದು. ಹಣವನ್ನು ಎಂ.ಓ./ಡ್ರಾಫ್ಟ್/ಚೆಕ್ (ಕಮೀಷನ್ ಎರಡು ರೂಪಾಯಿ ಸೇರಿಸಿ) 'ಅಂಕಣ'ದ ಹೆಸರಿಗೆ ಕಳುಹಿಸುವುದು.

'ಅಂಕಣ'
ಕನ್ನಡ ದ್ವೈಮಾಸಿಕ
8, 'ಚಿರಂಜೀವಿ'
ಹಳೇ ಈಜುಕೊಳದ ರಸ್ತೆ
ಕೋದಂಡರಾಮಪುರ
ಬೆಂಗಳೂರು–560 003

ಮೂರು ಕವನ ಸಂಕಲನಗಳ ಸಮೀಕ್ಷೆ

ಬಿ. ಆರ್. ಲಕ್ಷ್ಮಣರಾವ್

೧

‘ಅನಾಮಿಕ ಆಂಗ್ಲರು’ ಕೆ. ಎಸ್. ನಿಸಾರ್ ಅಹಮದ್‌ರವರ ಎಂಟನೆಯ ಕವನ ಸಂಕಲನ. ಕನ್ನಡದ ಇಂದಿನ ಪ್ರಮುಖ ಕವಿಗಳಲ್ಲೊಬ್ಬರಾದ ನಿಸಾರರ ಈ ಸಂಕಲನ ಅವರ ಅತ್ಯಂತ ಪ್ರಾತಿನಿಧಿಕ ಸಂಕಲನವೂ ಆಗಿದೆ. 32 ಕವನಗಳುಳ್ಳ ಈ ಸಂಕಲನದಲ್ಲಿ ನಿಸಾರರ ಹಿಂದಿನ ಬಹುಪಾಲು ಸಂಕಲನಗಳಲ್ಲಿ ಇದ್ದಂತೆಯೇ ವಸ್ತು ವೈವಿಧ್ಯತೆ, ಎಂಥ ಓದುಗನನ್ನೂ ರಂಜಿಸಿ, ಗಮನ ಹಿಡಿದಿಡಬಲ್ಲ ಆಲಂಕಾರಿಕ ಶೈಲಿ, ಭಾವಾರ್ದ್ರತೆ, ದೈನಿಕ ವಿವರಗಳನ್ನು ಬೆರಗುಗಣ್ಣು ತೆರೆದ ಮನಸ್ಸಿನಿಂದ ಸೂಕ್ಷ್ಮವಾಗಿ ಗ್ರಹಿಸಿ ತನ್ನ ಕಾವ್ಯದ ಪರಿಕರಗಳಾಗಿ ಬಳಸಿಕೊಳ್ಳಬಲ್ಲ ಪ್ರತಿಭೆ, ಕಲ್ಪನಾಶೀಲತೆ, ಸ್ವವಿಮರ್ಶೆಯಿಂದ ಹದಗೊಂಡ, ಸಮತೋಲ ತಪ್ಪದ, ನವಿರಾದ ಹಾಸ್ಯ, ಅನುಕಂಪ, ವಿಷಾದಗಳ ಒಳಸುಳಿಗಳುಳ್ಳ ವಿಡಂಬನೆ, ಹಲವಾರು ವರ್ಷಗಳ ಸತತ ಪರಿಶ್ರಮದಿಂದ ರೂಢಿಸಿಕೊಂಡಿರುವ, ತನ್ನ ಸ್ವಂತಿಕೆಯ ಛಾಪು, ಕಸುವು, ನುಡಿಗಟ್ಟುಗಳುಳ್ಳ ಕಾವ್ಯಭಾಷೆ ಕಂಡು ಬರುತ್ತದೆ. ಆದರೆ ಈ ಸಂಕಲನವನ್ನು ಈ ಕವಿಯ ಹಿಂದಿನ ಸಂಕಲನಗಳಿಂದ ಭಿನ್ನವಾಗಿಸಿರುವ ಮತ್ತು ಕವಿಯ ಬೆಳವಣಿಗೆಯನ್ನು ಸಾಬೀತುಗೊಳಿಸುವ ಅಂಶವೆಂದರೆ ಇಲ್ಲಿ ಕವಿ ತನ್ನ ಧಾರ್ಮಿಕ, ರಾಜಕೀಯ ಮತ್ತು ಸಾಮಾಜಿಕ ದೃಷ್ಟಿ ಧೋರಣೆಗಳನ್ನು ಹಿಂದಿಗಿಂತ ಹೆಚ್ಚು ಧೈರ್ಯವಾಗಿ, ಖಚಿತವಾಗಿ, ಮುಕ್ತವಾಗಿ ಅಭಿವ್ಯಕ್ತಿಸಿರುವುದು. ಇವರ ಹಿಂದಿನ “ಸಂಜೆ ಐದರ ಮಳೆ” ಸಂಕಲನದ ‘ನಿಮ್ಮೊಡನಿದ್ದೂ ನಿಮ್ಮಂತಾಗದೆ’ ಮತ್ತು ‘ಅಮ್ಮ, ಆಚಾರ, ನಾನು’ ಕವಿತೆಗಳನ್ನು ಇಲ್ಲಿನ ‘ಸವತಿ ಮಕ್ಕಳ ಹಾಗೆ’ ಮತ್ತು ‘ರಂಗೋಲಿ ಮತ್ತು ಮಗ’ ಕವಿತೆಗಳೊಂದಿಗೆ ಕ್ರಮವಾಗಿ ಹೋಲಿಸಿದರೆ ಈ ವ್ಯತ್ಯಾಸ ಸ್ಪಷ್ಟವಾಗುತ್ತದೆ.

‘ನಿಮ್ಮೊಡನಿದ್ದೂ ನಿಮ್ಮಂತಾಗದೆ’ ಕವಿತೆಯಲ್ಲಿ ತನ್ನ ನಂಬಿಕೆ, ನಿಯತ್ತು, ಸಾಚಾತನ ಮತ್ತು ರಾಷ್ಟ್ರೀಯತೆಗಳನ್ನು ಸಂಶಯದಿಂದ ತನ್ನೆದುರಲ್ಲೇ ತನಿಖೆ ಮಾಡುವ ಮಂದಿಯನ್ನು ಹುಸಿನಗುತ್ತಾ ಎದುರಿಸುವುದು ಬಲುಕಷ್ಟದ ಕೆಲಸ ಎನ್ನುವ ಕವಿಯ ಧಾಟಿಯಲ್ಲಿ ರೋಷ, ವ್ಯಂಗ್ಯ, ವಿಷಾದ, ಹತಾಶೆಗಳೇ ಸ್ಥಾಯೀ ಭಾವಗಳಾಗಿವೆ.

‘ಸವತಿ ಮಕ್ಕಳ ಹಾಗೆ’ ಕವಿತೆಯ ಪ್ರಾರಂಭದ ಸಾಲುಗಳೂ ಇದೇ ಧಾಟಿಯಲ್ಲಿವೆ. ಹಾಲನುಣಿಸಿದ ಮೊಲೆಯ ಕೊಯ್ಯುವವರು. ಮರುಧರೆಯ ಕಡುನೆಂಟರು,

ಪಕ್ಕದ ಖೋಳನ ಏಜೆಂಟರು ಎಂದು ಸಂಶಯದ ಖೆಡ್ಡಕ್ಕೆ ದೂಡಿ, ಗಡ್ಡಕ್ಕೆ ಲೇಬಲ್ಲ ನಂಟಿಸಿ,

> **ಸವತಿ ಮಕ್ಕಳ ಹಾಗೆ ಕಾಡಬೇಡವ್ವ**
> **ಸವತಿ ಮಕ್ಕಳ ಹಾಗೆ ಕಾಡಬೇಡ**

ಎನ್ನುವ ಕವಿಗೆ ಈಗ ಪ್ರಖರವಾದ ಚಾರಿತ್ರಿಕ ಮತ್ತು ಸದ್ಯದ ಸಾಮಾಜಿಕ ಎಚ್ಚರವಿದೆ. ಆದ್ದರಿಂದ ಸತ್ಯ ನಿಷ್ಠುರವಾದ ಈ ಸಾಲುಗಳು ಬಂದಿವೆ :

> **ನಾವೂನು ಭಾರತೀಯ ಬಸಿರವರೆ ಎನ್ನುತ್ತ**
> **ತಾಯೆಂಬ ಬಾಯಲ್ಲೇ ನಾಯುಣಿಸು ತಿನ್ನುತ್ತ**
> **ಮೀರ್ ಸಾದಿಖರು ಮತ್ತೆ ನಮ್ಮಕ್ ಹರಾಮರು**
> **ಮೊಘಲಾಯಿ ದೌಲತ್ತು ಮೆರೆಯುವ ಅನಾಮರು**
> **ಇದ್ದಾರು ಕೋಮಿನ ಕಂತ್ರಾಟುದಾರರು**
> **ಮಾಸುಮಾ ಮಂದಿಯ ನೆಮ್ಮದಿ ಚೋರರು**
> **ಮಾಡವ್ವ ಅಂಥವರ ಸುಳಿಯ ಸಫಾಯಿ**
> **ನಿಷ್ಪಾಪಿಗಳಿಗಾಗುವ ನಿರ್ಭಯದಾಯಿ**

ಕತೆಯ ಕೊನೆಯ ಭಾಗದಲ್ಲಿ

> **ಬೆಳಕ ಕಂಡೆವು ಇಲ್ಲೆ, ಬಾಡಿ ಬೀಳುವೆವಿಲ್ಲೆ,**
> **ಏನಾಟ ನಡೆದರೂ ನಿನ್ನಡಿಯ ಗಡಿಯಲ್ಲೆ**

ಎನ್ನುವ ಸಾಲುಗಳಲ್ಲಿ ಕವಿಗೆ ತನ್ನಂಥ ನಿಷ್ಕಲ್ಮಶ ಮನಸ್ಸುಗಳ ಬಗ್ಗೆ ನಿರಪರಾಧಿ ಭಾವವಿದೆ, ಹೆಮ್ಮೆಯಿದೆ. ಆದ್ದರಿಂದ ಕವಿತೆ ಗುಣಾತ್ಮಕವಾದ ಆರೋಗ್ಯಕರ ಪರಿಣಾಮ ಬೀರಿ, ಹೃದಯ ಸ್ಪರ್ಶಿಯಾಗುತ್ತದೆ.

ಇದೇ ರೀತಿ 'ಅಮ್ಮ, ಆಚಾರ, ನಾನು' ಎಂಬ ಕವಿತೆ 'ಬುರ್ಖಾ'ದಂಥ ಒಂದು ಧಾರ್ಮಿಕ ಆಚಾರದ ಬಗ್ಗೆ ಇದ್ದರೂ, ಅಲ್ಲಿ ಹಾಸ್ಯ ಮತ್ತು ಚತುರ ಮಾತುಗಾರಿಕೆ ಪ್ರಧಾನವಾಗಿರುವುದರಿಂದ, ಕವನದಲ್ಲಿ ಗಂಭೀರ ಚಿಂತನೆ ಮಸಕಾಗುತ್ತದೆ. ಆದರೆ 'ರಂಗೋಲಿ ಮತ್ತು ಮಗ' ಕವಿತೆಯಲ್ಲಿ ಕವಿ ಇಂಥ ದಿಟ್ಟತನದ ಆತ್ಮ ಪರೀಕ್ಷೆಗೆ ತನ್ನನ್ನು ಮುಕ್ತವಾಗಿ ಒಡ್ಡಿಕೊಳ್ಳುತ್ತಾರೆ. 'ರಂಗೋಲಿ ಯಾಕೆ ಬಿಡಿಸುತ್ತಾರೆ ?' ಎಂಬ ಮಗನ ಪ್ರಶ್ನೆಗೆ 'ನಮ್ಮ ಪದ್ಧತಿಗೆ ಅದು ಸಲ್ಲ, ಖುರಾನ್ ಧರ್ಮಗ್ರಂಥಗಳಲ್ಲಿ ಹೇಳಿಲ್ಲ' ಎಂಬ ಜಾರಿಕೆಯ ಹಾರಿಕೆಯ ಉತ್ತರ ಕೊಟ್ಟಾದ ನಂತರ ಕವಿಯ ಆತ್ಮಸಾಕ್ಷಿ ಕೆದಕಿ ಕೇಳುತ್ತೆ 'ಮನೆಯ ಕಟ್ಟಿದ ಇಟ್ಟಿ, ನಿನ್ನ ಹೆಸರು ಮನೆಯೆದುರಲ್ಲಿ

ಬರೆಸಿರುವೆಯಲ್ಲ, ಹೇಳದೆಯೆ ಖುರಾಸಿನಲ್ಲಿ?' ಇಂಥ ಸತ್ಯ ನಿಷ್ಠುರತೆ ಸಾಧ್ಯವಾಗಿರುವು ದರಿಂದ ಈ ಕವಿತೆ 'ಅಮ್ಮ, ಆಚಾರ, ನಾನು' ಕವಿತೆಗಿಂತ ಹೆಚ್ಚು ಮುಖ್ಯವಾಗುತ್ತದೆ.

ಇದೇ ನಿಷ್ಪಕ್ಷಪಾತ ದೃಷ್ಟಿ ಇಲ್ಲಿನ 'ಸ್ವಜನೋದ್ಧಾರಕರು' ಎಂಬ ಕವಿತೆಯಲ್ಲೂ ಪ್ರಖರವಾಗಿ ಪಡಿ ಮೂಡಿದೆ. 'ಕಾಲಿಟ್ಟ ಕಡೆ ಹಗೆಯ ಹೆಬ್ಬುನಾದಿಯ ಮೇಲೆ ಅಶ್ರು ಮಂದಿರಗಳನು ನೆರೆಸುವ' ಇಂಥ ಸಮಾಜ ಕಂಟಕರನ್ನು ಕವಿ ಚಾಟಿ ಮಾತುಗಳಿಂದ ದಂಡಿಸಿದ್ದಾರೆ.

ಸಂಕಲನದ ಶೀರ್ಷಿಕೆಯ 'ಅನಾಮಿಕ ಆಂಗ್ಲರು' ಕವನದಲ್ಲಿ ಕವಿ ಶ್ರೀರಂಗ ಪಟ್ಟಣದಲ್ಲಿರುವ ಆಂಗ್ಲರ ಸ್ಮಶಾನದ ಬಗ್ಗೆ ಬರೆಯುತ್ತಾ 'ಪರದೇಶದಲಿ ಜನಿಸಿ, ಪರಾ ಧೀನರಾಗಿಲ್ಲಿ, ಪರದೇಶಿಯಾದಂಥ ವಿದೇಶೀಯರ' ಬಗ್ಗೆ ವ್ಯಂಗ್ಯಕ್ಕಿಂತ ಮಿಗಿಲಾಗಿ ಗಾಢ ಅನುಕಂಪ ತೋರಿದ್ದಾರೆ.

ಬಿ.ಜಿ.ಎಲ್. ಸ್ವಾಮಿ, ಬೀಚಿ, ಜಿ.ಟಿ.ಎನ್ ಹಾಗೆಯೇ ಅರಬಿಂದೊ ಮತ್ತು ಕ್ರಿಸ್ತನ ವ್ಯಕ್ತಿ-ಚಿತ್ರಗಳನ್ನು ತಮ್ಮ ಕವನಗಳಲ್ಲಿ ಸೂಕ್ಷ್ಮ ವಿವರಗಳೊಂದಿಗೆ ಕಟ್ಟಿ ಕೊಡುತ್ತಲೇ, ಕವಿ ತನ್ನ ಸುತ್ತಲ ಪರಿಸರದ ಬಗ್ಗೆ ವ್ಯಾಖ್ಯಾನಿಸುವುದರಿಂದ ಆ ಕವಿತೆಗಳು ಹೆಚ್ಚಿನ ಆಳ ವಿಸ್ತಾರ ಪಡೆದು ಪರಿಣಾಮಕಾರಿಯಾಗುತ್ತವೆ.

ನಿಸಾರರ ಕಾವ್ಯದಲ್ಲಿ ಕೊಂಚ ವಾಚಾಳಿತನ ಹೆಚ್ಚೆಂದೇ ಹೇಳಬಹುದು. ಜೊತೆಗೆ, ಇವರಿಗೆ ಮೊದಲಿಂದಲೂ ಅಂತ್ಯ ಪ್ರಾಸದ ಬಗ್ಗೆ ಅಮಿತ ಪ್ರೀತಿ, ಕೆಲವೊಮ್ಮೆ ಇದು ಅತಿಯಾಯಿತೆನ್ನಿಸಿದರೂ, ಬಹಳಷ್ಟು ಸಲ ಅರ್ಥಪೂರ್ಣ ಆಕರ್ಷಕ ಸಾಲುಗಳು ಮೂಡಿ ಬರುತ್ತವೆ. ಉದಾಹರಣೆಗೆ, 'ಏಕ ಪತ್ನೀವ್ರತಸ್ಥರು। ಏಕದೇಹ ರತಸ್ಥರು। ಒಂದೇ ಕೆರೆಯ ಬೆಸ್ತರು।' ಇವರ ಟಂಕಸಾಲೆಯಿಂದ ಹೊರಬಂದ 'ಧನೇಂದ್ರಿಯ,' 'ಸ್ತ್ರೀಮಂತ', 'ಪ್ರಸಿತೆಯರು', 'ಅಮಲಿಗ', 'ಭಾವಾಡಿಗ' ಮುಂತಾದ ಪದಪುಂಜ ಗಳು ಭಾಷೆಗೆ ಉತ್ತಮ ಕೊಡುಗೆಗಳಾಗಿವೆ.

'ಖಾಲಿ ಸೈಟುಗಳು', 'ನಗರ ನಿವಾಸಿಗಳು', 'ಸಾವಿಗೆ ಅತಿಥಿ ಪರಿಚಯ', 'ಎಲ್ಲಿದ್ದೀಯೋ ಹುಡುಗ', 'ಸೇಬುಗಳು', 'ಮತ್ತೇನೆ ಕೇಳಿದರು', 'ಕಣ್ಣುಗಳು' ಮತ್ತು 'ಸಿದ್ಧತೆ' ಈ ಸಂಕಲನದ ಇನ್ನಿತರ ಉತ್ತಮ ಕವಿತೆಗಳಾಗಿವೆ.

ಒಟ್ಟಾರೆ, 'ಅನಾಮಿಕ ಆಂಗ್ಲರು' ನಿಸಾರರ ಕಾವ್ಯದ ಬೆಳವಣಿಗೆಯ ದೃಷ್ಟಿ ಯಿಂದಲೂ, ಹೆಚ್ಚು ಹೆಚ್ಚು ಸಮಷ್ಟಿಯ ಬಲವನ್ನು ಗಳಿಸಿಕೊಳ್ಳುತ್ತಿರುವ ಕನ್ನಡ ಕಾವ್ಯದ ದೃಷ್ಟಿಯಿಂದಲೂ ಗಮನಾರ್ಹ ಸಂಕಲನವಾಗಿದೆ.

೨

'ಹೂವು ಹೆಣ್ಣುತಾರೆ' ಚಂದ್ರಶೇಖರ ಪಾಟೀಲರ ಆರನೆಯ ಕವನ ಸಂಕಲನ. ಬಂಡಾಯ ಕಾವ್ಯದ ಪ್ರಮುಖ ನೇತಾರರಾದ ಈ ಕವಿ ಸಂಕಲನದ ಶೀರ್ಷಿಕೆಯ 'ಹೂವು ಹೆಣ್ಣು ತಾರೆ' ಕವನದಲ್ಲಿ ಹೀಗೆ ಹೇಳುತ್ತಾರೆ :

ನಾವು ಹೂವಿನ ಬಗ್ಗೆ
ನಾವು ಹೆಣ್ಣಿನ ಬಗ್ಗೆ
ನಾವು ತಾರೆಯ ಬಗ್ಗೆ
    ಹಾಡುವುದು ಬೇಡ–
    ಅಂತ, ಗೆಳೆಯ,
    ನಾವು ಹೇಳುವುದು ಬೇಡ.

ಕವಿತೆ ಹೀಗೆ ಕೊನೆಗೊಳ್ಳುತ್ತದೆ :

ಹೂವು ಹೆಣ್ಣಾಗಿ
ಹೆಣ್ಣು ತಾರೆಯಾಗಿ
ತಾರೆ ಹೂವಾಗಿ–
ಮೆರೆವಂಥ ಚೆಲುವ ನಾಡು
ನಮ್ಮ ಹಾಡಿಗೆ ಕನಸಾಗಿ ಕಾಡದೆ ಹೋದರೆ
ಗೆಳೆಯ,
ಅದು ಎಂಥ ಹಾಡು ?
ಅದು ಎಂಥ ನಾಡು ?

ಆಶ್ಚರ್ಯದ ಸಂಗತಿಯೆಂದರೆ ಈ ಇಡೀ ಸಂಕಲನದಲ್ಲಿ ವಸ್ತು ಮತ್ತು ಧಾಟಿಯ ದೃಷ್ಟಿಯಿಂದ, ಹೂವು ಹೆಣ್ಣು ತಾರೆಗಳ ಬಗ್ಗೆ ಕವಿಯ ಈ ನಿಲುವನ್ನು ಪ್ರತಿಪಾದಿಸುವ ಇನ್ನು ಒಂದಾದರೂ ಕವನ ಕಂಡು ಬರುವುದಿಲ್ಲ.

ಪಾಟೀಲರದ್ದು ಮುಖ್ಯವಾಗಿ ಲೇವಡಿಯ ಧ್ವನಿ. ಇಲ್ಲಿನ ಬಹಳಷ್ಟು ವ್ಯಕ್ತಿಚಿತ್ರಗಳಲ್ಲಿ, ವಿಡಂಬನೆಗಳಲ್ಲಿ ಸೂಕ್ಷ್ಮಗ್ರಹಿಕೆಯಾಗಲೀ, ಆರ್ತ–ನಿರೀಕ್ಷಣೆಯಾಗಲೀ ಕಂಡು ಬರುವುದಿಲ್ಲ. ಆದ್ದರಿಂದ ಇಂಥ ಕವನಗಳು ಗಾಢ ಪರಿಣಾಮ ಬೀರುವುದಿಲ್ಲ. ಉದಾಹರಣೆಗೆ ಇಲ್ಲಿನ 'ಇಪ್ಪತ್ತಂಶದ ಜನತಾಗೀತೆ', 'ಬಸವ ಪುರಾಣ', 'ಇವಿ', 'ಮೇಜರನ ಕೊನೆಯ ದಿನಗಳು' ಮತ್ತು 'ರಾಜೀವ ಸುಪ್ರಭಾತ' ನೋಡಬಹುದು.

ಇದಕ್ಕೆ ಅಪವಾದವಾಗಿ 'ಬಸವ' ಮತ್ತು 'ನೆಲ್ಸನ್ ಮ್ಯಾಂಡೆಲಾ' ಕವನಗಳಿವೆ. ಬಸವಣ್ಣನವರ ಸಂಕೀರ್ಣ ವ್ಯಕ್ತಿತ್ವದ ಸಾಮಾಜಿಕ, ರಾಜಕೀಯ, ಧಾರ್ಮಿಕ ಎಳೆಗಳನ್ನು ಸೂಕ್ಷ್ಮವಾಗಿ ಬಿಡಿಸಿ ನೋಡುತ್ತಾ ಹೋಗುವ ಕವಿ, ಆನುಷಂಗಿಕವಾಗಿ ನಮ್ಮ ಸಾಮಾಜದ ಹಿಂದಿನ ವಿಘಟನೆಯನ್ನೂ ವಿಕ್ಷಿಪ್ತತೆಯನ್ನೂ ಮನಗಾಣಿಸುತ್ತಾರೆ.

ಹರಿವ ನೀರಿನ ಗುಂಟೆ ಹರಿದ ಜಂಗಮ ನೀನು
ಲಿಂಗದಲಿ ಒಂದಾದ ಅಂಗ ಬಸವಾ

ಕಪ್ಪು ಹೆಬ್ಬಂಡೆಗಳ ದಂಡೆ ಹಾಗೇ ಉಂಟು
ಸ್ಥಾವರಕ್ಕಳಿವುಂಟೆ ಹೇಳು ಬಸವಾ

ಎಂದು, ಮಾರ್ಮಿಕವಾಗಿ ಕೊನೆಗೊಳ್ಳುವ, ಚೌಪದಿಯ ಬಿಗಿಬಂಧದಲ್ಲಿರುವ ಈ ವಿಷಾದ ಗೀತೆ ಈ ಸಂಕಲನದ ಹಾಗೂ ಕನ್ನಡದ ಉತ್ತಮ ಕವನಗಳಲ್ಲಿ ಒಂದಾಗಿದೆ. ಇದೇ ಮಾತನ್ನು 'ನೆಲ್ಸನ್ ಮ್ಯಾಂಡೆಲಾ' ಕವನದ ಬಗ್ಗೆಯೂ ಹೇಳಬಹುದು.

'ಒಂದು ಚಲಾವಣೆ ಲಾವಣಿ', 'ಮುರಾರಜಿಗೊಂದು ಮನವಿ' ಮತ್ತು 'ತಗಣಿ ಮತ್ತು ಹ್ಯಾಮ್ಲೆಟ್' ವಿಡಂಬನೆಗಳಾದರೂ ಕಟಕಿ ಮತ್ತು ಲೇವಡಿಯ ಪಾಟೀಲರ ಪೇಟೆಂಟ್ ಧಾಟಿಯಲ್ಲಿಲ್ಲದೆ, ತಿಳಿಹಾಸ್ಯದ ಧಾಟಿಯಲ್ಲಿದ್ದು ಮನಮುಟ್ಟುತ್ತವೆ. 'ಖಗ್ರಾಸ' ಕವನದಲ್ಲಿ ಅಪವಾದವೆಂಬಂತೆ ಸ್ವವಿಮರ್ಶೆ ಕಂಡುಬಂದಿದೆ.

ಈ ಸಂಕಲನದ ಮತ್ತೊಂದು ಉತ್ತಮ ರಚನೆ 'ಮಾಮರದ ಬನದಲ್ಲಿ'. ಎಲ್ಲ ಬಿಂಕ ಬಡಿವಾರಗಳನ್ನು ಕಿತ್ತೆಸೆದ ಕವಿಕಲ್ಪನೆ ಇಲ್ಲಿ ಅನುಭಾವದ ತಾರಸ್ತರದಲ್ಲಿ ಸ್ವಚ್ಛಂದ ಹರಿದಾಡಿದೆ:

ಆ ಮರ ಈ ಮರ ಎಲ್ಲ ಚಾಮರ ಬೀಸಿ
ಕರೆದಾಗ ಎಲ್ಲ ಮರ ನನ್ನ ಮಾಮರವೇ
ಎಲ್ಲ ಹಕ್ಕಿಯ ದನಿ ನನ್ನ ದನಿಯೇ ಓಃ
ಎಲ್ಲಿ ಮಾಮರ ಎಲ್ಲಿ ಎಲ್ಲಿ ಕೋಗಿಲೆಯೋ
ಮಾಮರದ ಬನದಲ್ಲಿ ಸಾವಿರದ ಮಾಮರ
ಮರಮರದ ನರದಲ್ಲಿ ಹಕ್ಕಿ ಹಾಡು
ಮಣ್ಣಿಗೂ ಮುಗಿಲಿಗೂ ಬಿಗಿದ ಹಾಡಿನ ತಂತು,
ಕುಂತಲ್ಲಿ ತೂಗಿರುವೆ ನನಗಿಷ್ಟೆ ಗೊತ್ತು.

'ಬಸವ', 'ನೆಲ್ಸನ್ ಮ್ಯಾಂಡೆಲಾ', 'ಮಾಮರದ ಬನದಲ್ಲಿ' ಮತ್ತು 'ಹೂವು ಹೆಣ್ಣು ತಾರೆ' ಕವನಗಳು ಚಂದ್ರಶೇಖರ ಪಾಟೀಲರ ಕಾವ್ಯ ಮತ್ತೊಂದು ಮುಖ್ಯ ತಿರುವಿನ ಸಂಭಾವ್ಯತೆಯಲ್ಲಿರುವುದನ್ನು ಸೂಚಿಸುತ್ತವೆ.

೩

'ಕೊಂಪೆಯಲ್ಲಿ ಕೋಗಿಲೆ' ದೇಶ ಕುಲಕರ್ಣಿಯವರ ಎರಡನೆಯ ಕವನ ಸಂಕಲನ. ಇವರ ಮೊದಲ ಕವನ ಸಂಕಲನವಾದ 'ನೆಪವಿಲ್ಲದ ಪ್ರೀತಿ'ಗೂ ಈಗಿನ ಸಂಕಲನಕ್ಕೂ ಎದ್ದು ಕಾಣುವ ವ್ಯತ್ಯಾಸಗಳಿವೆ. 'ನೆಪವಿಲ್ಲದ ಪ್ರೀತಿ'ಯ ಕವನಗಳು 'ನವ್ಯ ಮಾರ್ಗ'ದ ಶಕ್ತಿ ಮತ್ತು ದೌರ್ಬಲ್ಯಗಳನ್ನು ಮೈಗೂಡಿಸಿಕೊಂಡಿದ್ದವು. ಆ ಕವನಗಳ ಶಿಲ್ಪದಲ್ಲಿ ಪ್ರತಿಮಾ ವಿಧಾನ, ಸಂಕೀರ್ಣತೆ, ಜಟಿಲತೆಗಳಿದ್ದವು. ಅರ್ಥದಲ್ಲಿ ಅಪೇಕ್ಷ

ಣೇಯ ಆ್ಯಂಟಿಗ್ಯುಟಿ ಮತ್ತು ಅಲ್ಲಲ್ಲಿ ಅಸ್ಪಷ್ಟತೆಯೂ ಇದ್ದವು. ಆದರೆ ಈಗಿನ ಸಂಕಲನದ ಬಹುಪಾಲು ಕವನಗಳು ಸರಳ, ವಾಚ್ಯಧಾಟಿ ಮತ್ತು ನೇರ ಗದ್ಯಲಯದಲ್ಲಿರುವುದರಿಂದ ತಮ್ಮ ಕಾವ್ಯ ಪರಿಣಾಮಕ್ಕೆ ಮುಖ್ಯವಾಗಿ ಧ್ವನಿ ಮತ್ತು ಐರನಿಯನ್ನೇ ಅವಲಂಬಿಸಿವೆ. ವರ್ತಮಾನದ, ನಾಗರಿಕ ಪರಿಸರದ ಇಲ್ಲಿನ ಚಿತ್ರಗಳು ಮತ್ತು ಮೆಲುದನಿ, ತಟ್ಟನೆ ಎ.ಕೆ. ರಾಮಾನುಜನ್ನರ ಕವನಗಳನ್ನು ತಮ್ಮ ವಸ್ತು ಮತ್ತು ಶೈಲಿಯಲ್ಲಿ ನೆನಪಿಸುತ್ತ ವೆಯಾದರೂ, ಧಾಟಿಯಲ್ಲಿ ಇವು ವಿಭಿನ್ನವಾಗಿವೆ. ರಾಮಾನುಜನ್ನರದ್ದು ವಸ್ತು ನಿಷ್ಠ ತಟಸ್ಥ ಧಾಟಿಯಾದರೆ ದೇಶ ಕುಲಕರ್ಣಿಯವರ ಧಾಟಿಯಲ್ಲಿ ವ್ಯಂಗ್ಯ, ವಿಷಾದ, ಜಿಗುಪ್ಸೆಗಳಿವೆ.

ಇಲ್ಲಿನ 'ಪರೋಕ್ಷ', 'ಕೊಂಪೆ', 'ಅಮೂರ್ತ', 'ಕೊಂಪೆಯಲ್ಲಿ ಕೋಗಿಲೆ', 'ಇದು ಬರಿ ಬೆಳಗಲ್ಲೋ ಅಣ್ಣ' ಮತ್ತು 'ಅಭಿಜ್ಞಾನ ಶಾಕುಂತಲ'ದಂಥ ಉತ್ತಮ ರಚನೆಗಳೂ ಸಹ ತಮ್ಮಲ್ಲಿ ಮುಚ್ಚಿಟ್ಟುಕೊಳ್ಳುವ, ಓದುಗನ ಕಲ್ಪನೆಗೆ, ಚಿಂತನೆಗೆ, ಪರಿಶ್ರಮಕ್ಕೆ ಕ್ರಮೇಣ ಬಿಟ್ಟುಕೊಡುವ ಅಂಶಗಳು ಕಡಿಮೆ. ಆದ್ದರಿಂದ ಮೊದಲ ಓದಿಗೇ ಮನಸೆಳೆದು, ಮೈತೆರೆಯುವ ಈ ಕವನಗಳು ಮತ್ತೆ ಮತ್ತೆ ಓದಿಸಿಕೊಳ್ಳುವ, ತನ್ನ ಸಂಕೀರ್ಣತೆ ನಿಗೂಢತೆಯಿಂದ ಓದುಗನನ್ನು ಬಹುಕಾಲ ಕಾಡುವ ಕವನಗಳಾಗಿ ನಿಲ್ಲುವುದಿಲ್ಲ. ಹಾಗೆಂದು ಈ ಕವಿತೆಗಳು ತಮ್ಮ ಇತಿಮಿತಿಯಲ್ಲಿ ಸಾಧಿಸಿರುವ ಪರಿಣಾಮವನ್ನು ಕಡೆಗಣಿಸುವಂತಿಲ್ಲ.

ಉದಾಹರಣೆಗೆ, ಪ್ರಿನ್ಸ್‌ಚಾರ್ಲ್ಸ್ ಮತ್ತು ಡಯಾನರ ಮದುವೆಯ ಸಾರ್ವಜನಿಕತೆ, ರಾಜವೈಭವದ ಅಂದಾದುಂದಿ, ಪ್ರಥಮ ರಾತ್ರಿಯ ಯಾಂತ್ರಿಕ ಮಿಲನ ಇತ್ಯಾದಿಗಳನ್ನು, ತಿಪ್ಪಣ್ಣ ಮತ್ತು ಸುಬ್ಬುರತ್ನರಂಥ ಹಳ್ಳಿಯ ಮುಗ್ಧ ಜೋಡಿಯ ಸರಳ ಖಾಸಗಿ ಮದುವೆಗೆ ಮತ್ತು ಅವರ ಪ್ರಥಮ ರಾತ್ರಿಯ ರೋಮಾಂಚಕ ಅನುಭವಕ್ಕೆ ವೈದೃಶ್ಯವಾಗಿಸಿ ರಚಿಸಿರುವ 'ಇದು ಬರಿ ಬೆಳಗಲ್ಲೋ ಅಣ್ಣ' ನಿಜವಾದ ಜೀವನಾನಂದದ ನೆಲೆ ಸೆಲೆಗಳನ್ನು ಶೋಧಿಸುವ ಸುಂದರ ಕವನವಾಗಿದೆ. ಇಲ್ಲಿನ ಉತ್ಸಾಹದ ಲಯ ಮತ್ತು ಪ್ರಾಸಗಳು ಈ ಕವನದ ಪರಿಣಾಮವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿವೆ.

'ಕೊಂಪೆಯಲ್ಲಿ ಕೋಗಿಲೆ' ಕವನದಲ್ಲಿ ಕಾಳಿದಾಸ, ಕೀಟ್ಸ್, ಕುವೆಂಪುವಿನಂಥ ರಮ್ಯ ಅನುಭಾವಿಕ ಕವಿಗಳ ಕಾವ್ಯೋದ್ಯಾನದಲ್ಲಿ ಅರ್ಥಪೂರ್ಣವಾಗಿ, ಅನಿವಾರ್ಯವಾಗಿ ಹಾಡುವ ಕೋಗಿಲೆಯನ್ನು, ಇಂದಿನ ನಾಗರಿಕ ಕೊಂಪೆಗಳ ಗೊಬ್ಬರದ ಗಬ್ಬುರಾಡಿಯಲ್ಲಿ, ತೀರದ ತಾಪತ್ರಯಗಳ ಜಂಜಡದ ಭ್ರಷ್ಟ ಪರಿಸರದಲ್ಲಿ ಒರಲುವ ಕೋಗಿಲೆಗೆ ವೈದೃಶ್ಯವಾಗಿಸಿ ಕವಿ, 'ಈ ಕೋಗಿಲೆ ಯಾವ ಘನ ಉದ್ದೇಶಕ್ಕಾಗಿ ಒರಲುತ್ತಿರಬಹುದು?' ಎಂದು ಬೆರಗಾಗುತ್ತಾರೆ-ಹಾಗೆಯೇ ಇಂಥ ಭ್ರಷ್ಟ ಸನ್ನಿವೇಶದಲ್ಲಿ ಕನಸುಗಾರನಾದ, ಸೂಕ್ಷ್ಮಸಂವೇದಿಯಾದ, ಸಂಕೋಚಶೀಲನಾದ, ಸ್ವಾತಂತ್ರ್ಯಪ್ರಿಯನಾದ ಕವಿ

ಕೋಗಿಲೆಯ ಸಂದಿಗ್ಧ ಮನಃಸ್ಥಿತಿ ಪರಿಸ್ಥಿತಿಯನ್ನೂ ಧ್ವನಿಪೂರ್ಣವಾಗಿ ಅಭಿವ್ಯಕ್ತಿಸುತ್ತಾರೆ.

ಕಿರುಗವನಗಳಾದ 'ಅದೇಗತಿ', 'ಸ್ಥಿರಚಿತ್ರ', 'ಸ್ಥಿರಪ್ರಜ್ಞ', 'ಜೊರೆ' ಮತ್ತು 'ಮುಖವಾಡ' ದಿನನಿತ್ಯದ ಸುದ್ದಿ ಸಂಗತಿಗಳಿಗೆ ಕವಿ ತೋರುವ ಚುರುಕಾದ, ವಿನೋದದಲ್ಲೂ ವಿಷಾದದ ಆಳಗ್ರಹಿಕೆಯುಳ್ಳ ಸೂಕ್ಷ್ಮವಾದ ಪ್ರತಿಕ್ರಿಯೆಗಳನ್ನು ಆಕರ್ಷಕವಾಗಿ ದಾಖಲಿಸುತ್ತವೆ.

ಒಟ್ಟಾರೆ 'ಕೊಂಪೆಯಲ್ಲಿ ಕೋಗಿಲೆ' ಸಂಕಲನ ದೇಶ ಕುಲಕರ್ಣಿಯವರ ಕಾವ್ಯದ ಬೆಳವಣಿಗೆಯ ಬಗ್ಗೆ ಕುತೂಹಲ ಮತ್ತು ಭರವಸೆ ಮೂಡಿಸುತ್ತದೆ.

ಕೃಪೆ : ಆಕಾಶವಾಣಿ

"ವಿ.ಸೀ.ಯವರ ಕೃತಿಗಳನ್ನು ನೋಡಿ ಅವರ ಗಂಭೀರ ಸ್ವಭಾವ, ಆಳವಾದ ವಿಚಾರ, ತುಂಬು ಪಾಂಡಿತ್ಯಗಳ ಪರಿಚಯ ಮಾಡಿಕೊಂಡವರಿಗೆ ಅವರ ಕೋಮಲ ಸುಕುಮಾರ ಜೀವನದ ಪರಿಚಯವಾಗುವುದು ಸ್ವಲ್ಪ ಕಷ್ಟ 'ಗೀತೆಗಳು', 'ನೆಳಲೂ ಬೆಳಕು', 'ದೀಪಗಳು', 'ದ್ರಾಕ್ಷಿ-ದಾಳಿಂಬೆ' ಗೀತಾ ಸಂಗ್ರಹಗಳ ಮೂಲಕ ಕನ್ನಡ ಭಾವಗೀತೆಗಳ ವ್ಯಾಪ್ತಿಯನ್ನು ವಿಸ್ತರಿಸಿ, ವಿಚಾರದ ಹಿರಿಮೆಯನ್ನು ಕವಿ ಸ್ಥಾಪಿಸಿದ್ದಾರೆ. ಅವರ ಗೀತೆಗಳಿಂದ ವಿಲಾಸ ದೊರೆಯುವುದಿಲ್ಲ. ವಿಹಾರವೂ ಅಷ್ಟಕ್ಕಷ್ಟೇ ಕಾವ್ಯದ ಉದ್ದೇಶ ಓದುಗನಿಗೆ ಕಚಗುಳಿಯಿಡುವುದೋ ಆವನ ಭಾವ ಸಾಮ್ರಾಜ್ಯವನ್ನು ವಿಸ್ತರಿಸುವುದೋ ಎಂಬ ಮಹತ್ವದ ಪ್ರಶ್ನೆಯನ್ನು ವಿ.ಸೀ.ಯವರ ಕಾವ್ಯ ಕೇಳುತ್ತಿದೆ. ನಮ್ಮ ಧರ್ಮ, ದೇವರು, ಸಮಾಜ, ದೈನಂದಿನ ನಡೆವಳಿಕೆ, ಸ್ವಾತಂತ್ರ್ಯಾಭಿಲಾಷೆ, ರೋಷ, ಕೋಪ, ಆಲಸ್ಯ, ನಿರ್ವಿಣ್ಣತೆಗಳನ್ನು ಕವಿ ಒಳಹೊಕ್ಕು ನೋಡಿದ್ದಾರೆ. ನಮ್ಮ ನಿರ್ಹೇತುಕ ಬಾಳಿನ ಗತಿಯನ್ನು ಕಂಡು ಕವಿ ಮರಗುತ್ತಾರೆ ಎಚ್ಚರಿಸುತ್ತಾರೆ. ನಾಳೆ ಯಾವುದೋ ಸುಭಿಕ್ಷ ಸ್ಥಿತಿ ಬರುತ್ತದೆ. ಲೋಕರಾಮರಾಜ್ಯವಾಗುತ್ತದೆ. ಅಲ್ಲಿ ಎಲ್ಲರೂ ಉಂಡುಟ್ಟು ಸುಖವಾಗಿರಬಹುದು ಎಂಬ ಕನಸಿನ ಚಿತ್ರವನ್ನು ಕವಿ ನಮ್ಮ ಮುಂದಿಡುವುದಿಲ್ಲ. ರಾಮರಾಜ್ಯವಾಗಬೇಕಾದರೆ ವ್ಯಕ್ತಿ, ಸಮಾಜ, ದೇಶ ಆದಕ್ಕಾಗಿ ದುಡಿಯಬೇಕು, ತ್ಯಾಗ ಮಾಡಬೇಕು. ನಡೆ, ನುಡಿಯನ್ನು ತಿದ್ದಿಕೊಂಡು ಪರರಿಗೆ ಅಹಿತವಾಗದ ತೆರದಲ್ಲಿ ವಿಮಲ ಬಾಳ್ವೆಯನ್ನು ಸಾಗಿಸಬೇಕು. ಕನಸು ಕಂಡರೆ ಸಾಲದು-ಕನಸು ಕಣಸಾಗಬೇಕು"

ಅ.ನ.ಕೃ.
ಕನ್ನಡ ಕುಲರಸಿಕರು

ನಮ್ಮ ಮೇಷ್ಟ್ರು ವಿ. ಸೀ.

ಸಿ. ಆರ್. ರಾವ್

ಅನೇಕ ರವಿವಾರಗಳಂತೆಯೇ ಅದೂ ಒಂದು ರವಿವಾರ. ಒಂದು ಸಾಹಿತ್ಯ ಕಾರ್ಯಕ್ರಮಕ್ಕಾಗಿ ನೆರೆದಿದ್ದ ಗೆಳೆಯರೊಂದಿಗೆ ಹರಟೆ ಹೊಡೆಯುತ್ತಿದ್ದಾಗ ಬಂತು ಸಿಡಿಲಿನಂತೆ, ವಿ.ಸೀ. ಮಡಿದರೆಂಬ ವಾರ್ತೆ. ಕೂಡಲೇ ದಿವಂಗತರ ಮನೆಗೆ ಧಾವಿಸಿದೆ. ಶುಭ್ರವಾದ ಬಿಳೀ ಬಟ್ಟೆಯನ್ನು ಹೊದ್ದು ಮಲಗಿದ್ದರು ವಿ. ಸೀ. ಸಹಜವಾಗಿಯೇ ಅನೇಕ ನೆನಪುಗಳು ನನ್ನನ್ನು ಮುತ್ತಿದುವು.

ಅದೇ ಮನೆಯಲ್ಲಿ, ಅದೇ ಕೊಠಡಿಯಲ್ಲಿ, ಎರಡು ವರ್ಷದ ಹಿಂದೆ (ಅಕ್ಟೋಬರ ಎರಡರಂದು) ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲು ಕೆಲವು ಸ್ನೇಹಿತರ ಜೊತೆ ಹೋಗಿ ಅವರಿಗೆ ಪ್ರಿಯವಾದ ಅಪ್ಪಟ ಬಿಳಿಯ ಪಂಚೆ ಮತ್ತು ಜುಬ್ಬದ ಬಟ್ಟೆ (1703 ಮಲ್ಲು ಇಲ್ಲವಾಗಿದೆಯಾಗಿ ಅದಕ್ಕೆ ಸಮನಾದುದನ್ನು ಕೊಂಡಿದ್ದೆವು !) ಕೊಟ್ಟದ್ದು ; ಅದಕ್ಕೂ ಎರಡು ವರ್ಷದ ಹಿಂದೆ ಅವರ **"ಹಿರಿಯರು, ಗೆಳೆಯರು"** ಪುಸ್ತಕದಲ್ಲಿ ನುಸುಳಿದ್ದ ಒಂದು ತಪ್ಪನ್ನು ಅವರ ಗಮನಕ್ಕೆ ತರಲು ಹೋಗಿದ್ದು ; ಆಗ ಅವರು ಮುಖ ಸಿಂಡರಿಸಿಕೊಂಡೇ ಮೆಚ್ಚುಕೆಯನ್ನು ವ್ಯಕ್ತಪಡಿಸಿದ್ದು—ಹೀಗೆ ಹಿಂದೆ ಹೋಗುತ್ತಾ ಸುಮಾರು ನಾಲ್ಕು ದಶಕಗಳನ್ನು ದಾಟಿ, ಆಗಿನ ಬೆಂಗಳೂರು ಇಂಟರ್‌ಮೀಡಿಯಟ್ ಕಾಲೇಜಿನ ಒಂದು ಕೊಠಡಿಯನ್ನು ಹೊಕ್ಕೆ, ಮಾನಸಿಕವಾಗಿ.

ಕನ್ನಡ ತರಗತಿ ; ಪಠ್ಯಪುಸ್ತಕ ಡಿ.ವಿ.ಜಿ. ಯವರ "ಶ್ರೀ ವಿದ್ಯಾರಣ್ಯ ವಿಜಯ" ; ಸೂತ್ರಧಾರ, ಕಂದಪದ್ಯಗಳನ್ನೊಳಗೊಂಡ ಸಾಂಪ್ರದಾಯಿಕ ನಾಟಕ. ನನ್ನ ಸಹಪಾಠಿಗಳಲ್ಲಿ ಕೆಲವರಾಗಲೇ ಅದನ್ನು ಕಬ್ಬಿಣದ ಕಡಲೆ ಎಂದು write off ಮಾಡಿಬಿಟ್ಟಿದ್ದರು ! ಇನ್ನೊಂದು ಪಠ್ಯಪುಸ್ತಕ ಸಿ.ಕೆ.ವಿ.ಯವರ "ಗೌತಮ ಬುದ್ಧ" ; ಸರಿ, ತೇರ್ಗಡೆಯಾಗಲು ಅಗತ್ಯವಾದ 35 ಅಂಕಗಳಿಗೆ "ಬುದ್ಧಂ ಶರಣಂ ಗಚ್ಛಾಮಿ" ಎಂದು ನಿರ್ಧರಿಸಿದ್ದರು. ಅಂದು ವಿದ್ಯಾರಣ್ಯ ವಿಜಯವನ್ನು ಪಾಠ ಮಾಡಲು ವಿ.ಸೀ. ಬರುತ್ತಾರೆಂದು ನಮ್ಮಲ್ಲಿ ಕೆಲವರಿಗಂತೂ ತುಂಬ ಖುಷಿಯಾಯಿತು. ಅದುವರೆಗೆ ವಿ.ಸೀ.ಯವರು ಸಾಕಷ್ಟು ಪ್ರಸಿದ್ಧರಾಗಿದ್ದರು. ಆ ಪ್ರಸಿದ್ಧಿಗೆ ಅನೇಕ ಕಾರಣಗಳಿದ್ದರೂ, ನನ್ನ ಮೆಚ್ಚಿಕೆಗೆ ಇದ್ದ ಕಾರಣಗಳೆಂದರೆ—ಅವರು ಬರೆದಿದ್ದ "ಪಂಪಾಯಾತ್ರೆ", ಅವರು ಅರ್ಥಶಾಸ್ತ್ರದಲ್ಲಿ ಎಂ.ಎ. ಎಂಬುದು ಮತ್ತು ಅವರು ಕನ್ನಡ ಪಾಠವನ್ನು ಇಂಗ್ಲಿಷಿನಲ್ಲಿ ಮಾಡುತ್ತಾರೆ ಎಂಬುದು. ಈ ಮುಪ್ಪುರಿಗೊಂಡು, ಅಂದಿನ ತರಗತಿಗೆ ಅವರು ಬರುವುದನ್ನು ಕಾಯುತ್ತಿದ್ದೆ. ವಿ.ಸೀ. ಬಂದರು. ನಮ್ಮ ಮೇಷ್ಟ್ರು ಬಂದರು.

ಅವರ ಉಡುಪಿನ ಶಿಸ್ತು ಇತ್ಯಾದಿ ನಾನು ಹೇಳುವುದಿಲ್ಲ. ಅವರು ಬರಿಗೈಯಲ್ಲಿ ಬಂದರೆಂಬುದು ಆಶ್ಚರ್ಯದ ಸಂಗತಿ–ಎಂದರೆ ಪಠ್ಯಪುಸ್ತಕವನ್ನು ತಂದಿರಲಿಲ್ಲ. ನಾನು ಮುಂದಿನ ಬೆಂಚಿನಲ್ಲಿ ಕೂತಿದ್ದೆನಾದುದರಿಂದ ನನ್ನ ಪುಸ್ತಕವನ್ನು ಕೊಟ್ಟೆ. ಮೊದಲು ನಾಟಕ ಪ್ರಕಾರದ ಬಗ್ಗೆ ಪ್ರಾಸ್ತಾವಿಕವಾಗಿ ಒಂದು 15 ನಿಮಿಷ ಹೇಳಿದರು. ನಂತರ ಓದಲು ಶುರು ಮಾಡಿದರು. ಮೊದಲಿಗೇ ಒಂದು ಕಂದ :

"ಪ್ರಣವವಿಬೋಧಕ ವದನಂ
ಪ್ರಣತ ಶ್ರೇಯೋನಿಕೇತನಂ ಪ್ರಾಜ್ಞಧನಂ"

ಎಂದು ಪ್ರಾರಂಭವಾಗುತ್ತದೆ. ಒಂದು ಸಲ ಇಡೀ ತರಗತಿಯ ಮೇಲೆ ಕಣ್ಣು ಹಾಯಿಸಿ,ಕಂದದ ಎರಡನೇ ಸಾಲಿನಲ್ಲಿ ಪದವಿಭಾಗ ಮಾಡುವಾಗ ಹೆಚ್ಚು ಕಡಿಮೆಯಾದರೆ ಎಂತಹ ಆಭಾಸವಾಗುತ್ತದೆ ನೋಡಿ ಎಂದು ಸೂಚ್ಯವಾಗಿ ಹೇಳಿ ಮುಂದುವರಿಸಿದರು. ಒಂದನೇ ಭಾಗದ ಮೂರನೆಯ ದೃಶ್ಯದಲ್ಲಿ ಪರಾಂಕಶಭಟ್ಟನು ಜನರನ್ನು ಯವನರಿಗೆ ಎದುರಾಗಿ ಹುರಿದುಂಬಿಸುತ್ತಾನೆ. ಜನರೆಲ್ಲ ಉತ್ಸಾಹದಿಂದ ಕೈಗೆ ಸಿಕ್ಕಿದ ಆಯುಧಗಳನ್ನು ಹಿಡಿದು ಯವನರನ್ನು ಸದೆಬಡಿಯುವುದಾಗಿ ಘೋಷಿಸಿ ನಿಷ್ಕ್ರಮಿಸುತ್ತಾರೆ. ಆಗ

ಪರಾಂಕುಶ : ಏನೂ ಅರಿಯದ ಈ ಜನರಿಗೇನೋ ಆವೇಶವನ್ನು ತಂದುದಾಯಿತು ; ಇದರಿಂದಾಗುವ ಫಲವನ್ನು ಮಾತ್ರ ಹೇಳಿಕೊಳ್ಳುವ ಹಾಗಿಲ್ಲ.

ಎಂಬ ಮಾತನ್ನು ಆಡುತ್ತಾನೆ. ನಾನು ನನ್ನ ಪದ್ಧತಿಯ ಪ್ರಕಾರ ನಾಟಕವನ್ನು ಮೊದಲೇ ಓದಿ ಬದಿಟಿಪ್ಪಣಿ ಹಾಕಿದ್ದೆ. ಈ ಮಾತುಗಳು ಷೇಕ್ಸ್‌ಪಿಯರ್‌ನ ಜೂಲಿಯಸ್ ಸೀಸರ್ ನಾಟಕದಲ್ಲಿ ಮಾರ್ಕ್ ಆಂಟೊನಿಯ "Mischief, thou art afoot ; take thou what course thou wilt" ಎಂಬ ಮಾತುಗಳನ್ನು ನೆನಪಿಗೆ ತರುತ್ತವೆಯೆಂದು ಟಿಪ್ಪಣಿ ಬರೆದಿದ್ದೆ. ವಿ. ಸೀ. ಯವರೂ ಅದೇ ಮಾತನ್ನೇ ಹೇಳಿದರು. ನಾನು ಬರೆದಿದ್ದ ಟಿಪ್ಪಣಿಯನ್ನು ಗಮನಿಸಿದರು. ನನ್ನ ಕಡೆ ಒಂದು ಮೆಚ್ಚಿಕೆಯ ನೋಟ ಹಾಯಿಸಿ ಪಾಠ ಮುಂದುವರೆಸಿದರು. ತರಗತಿಯು ಮುಗಿದನಂತರ ನನಗೆ ನನ್ನ ಪುಸ್ತಕವನ್ನು ಹಿಂತಿರುಗಿಸುವಾಗ ಮತ್ತೊಮ್ಮೆ ಒಂಡೆರಡು ಒಳ್ಳೆಯ ಮಾತಾಡಿದರು. ನನಗೆ ಹಿಗ್ಗೋ ಹಿಗ್ಗು. ಎಷ್ಟು ಹಿಗ್ಗೆಂದರೆ ಮುಂದಿನ ಗಣಿತದ ತರಗತಿಗೆ ಚಕ್ಕರ್ ಹಾಕಿ (ಮೊದಲೇ ಗಣಿತ, ಅದರಲ್ಲೂ Calculus) ಆಗ ತುಂಬ ಜನಪ್ರಿಯವಾಗಿದ್ದ ಬಿ. ಟಿ. ರಾಮಯ್ಯನ ಹೋಟೆಲಿಗೆ ಹೊರಟು ಬಿಟ್ಟೆ !

ಮುಂದುವರೆದಂತೆ ನಾಟಕದಲ್ಲಿನ ಅನೇಕ ಸನ್ನಿವೇಶಗಳ ಬಗ್ಗೆ ವಿ.ಸೀ. ಯವರೊಡನೆ ಚರ್ಚೆಮಾಡುವ ಸಂದರ್ಭಗಳು ಬಂದುವು. ಅವುಗಳಲ್ಲಿ ಒಂದು ಹೀಗಿದೆ–ಮೂರನೆಯ ಭಾಗದ ಎರಡನೆಯ ದೃಶ್ಯದಲ್ಲಿ ವಿದ್ಯಾರಣ್ಯರು ಹರಿಹರನಿಗೆ ಮಾರ್ಗದರ್ಶನ ಮಾಡುತ್ತಾ ಒಂದು ಸೂಚನೆಯನ್ನು ಕೊಡುತ್ತಾರೆ.

"ನಿನಗೆ ಮಿತ್ರರಾಗಿ ಬರುವ ಸಕಲ ಹಿಂದೂ ರಾಜರೂ ಪಾಳೆಯಗಾರರೂ
ನಿನ್ನ ಛತ್ರಚ್ಛಾಯೆಯಲ್ಲಿ ಸುಖಿಸಬಹುದೆಂದೂ, ಹಾಗೆ ಮಾಡದವರು
ನನ್ನ ಯೋಧರು ಹಾಕುವ ಸಂಕೋಲೆಗಳಲ್ಲಿ ದುಃಖಿಸಬೇಕಾಗುವು
ದೆಂದೂ ಜೈತ್ರ ಪತ್ರಿಕೆಯನ್ನು ಬರೆಯಿಸಿ ಕಳುಹಿಸು"

ಇದು "Fascist Fiat" ಎಂದು ಟಿಪ್ಪಣಿ ಮಾಡಿದ್ದೆ. ಆಗ ಎರಡನೆ ಜಾಗತಿಕ ಯುದ್ಧದ ಕಾಲ. ಹಿಟ್ಲರ್ ಯೂರೋಪಿನ ರಾಷ್ಟ್ರಗಳನ್ನು ಒಂದೊಂದಾಗಿ ಕಬಳಿಸುತ್ತಿದ್ದ ಕಾಲ. ವಿ. ಸೀ.ಯವರು ನನ್ನ ಅಭಿಪ್ರಾಯವನ್ನು ಒಪ್ಪಿಯೂ ಒಪ್ಪದಂತೆ ಮಾತನಾಡಿದರು. ಅಂದಿನ ಅಂತರರಾಷ್ಟ್ರೀಯ ರಾಜಕಾರಣದ ಚೌಕಟ್ಟಿನಲ್ಲಿ ನನ್ನ ವಿಶ್ಲೇಷಣೆ ತಾತ್ವಿಕವಾಗಿ ಸರಿಯೆಂದು ಕಂಡರೂ, ನಾವು ಓದುತ್ತಿದ್ದ ನಾಟಕದ ಕಾಲಮಾನದ ಚೌಕಟ್ಟಿನಲ್ಲಿ ವಿದ್ಯಾರಣ್ಯರನ್ನು ಹಿಟ್ಲರನಿಕಿಂತಲೂ ಬಿಸ್ಮಾರ್ಕ್‌ಗೆ ಹೋಲಿಸಬಹುದೆಂದರು. "It was a case of consolidation" ಎಂದು ವಾದಿಸಿದರು. ಆಗ ನನಗೆ ಅವರ ವಾದ ಅಷ್ಟಾಗಿ ಹಿಡಿಸಲಿಲ್ಲ.

ಅಂದಿನ ದಿನಗಳಲ್ಲಿ ಅವರು ಶಂಕರಪುರದಲ್ಲಿ ವಾಸ ಮಾಡುತ್ತಿದ್ದರು. ನಾನೂ ಅಲ್ಲಿಯೇ ಒಂದು ಕೊಠಡಿಯಲ್ಲಿ ಇರುತ್ತಿದ್ದೆ. "ಹತ್ತಿರವೇ ಇದ್ದೀರಲ್ಲ, ಯಾವಾಗಲಾದರೂ ಮನೆ ಕಡೆ ಬನ್ನಿ" ಎಂದರು.

ಅವರ ಶಂಕರಪುರದ ಮನೆಗೆ ಎರಡು ಬಾರಿ ಹೋಗಿದ್ದೆ. ಮೊದಲನೆಯ ಸಲ ಹೋಗಿದ್ದಾಗ ನಮ್ಮ ದೇಶದ ರಾಜಕೀಯ ವಾತಾವರಣ, ಯುದ್ಧದ ಬಗ್ಗೆ ಕಾಂಗ್ರೆಸ್ ಧೋರಣೆ ಎಷ್ಟು ಸರಿ ಎಂದು ಸುದೀರ್ಘವಾಗಿ ಚರ್ಚೆ ಮಾಡಿದೆವು. ಆಗ ಗಾಂಧೀಜಿಯವರ ಅತ್ಯಂತ ಹಿರಿಯ ಕೊಡುಗೆ "Ethical evaluation of political doctrines" ಎಂದು ಹೇಳಿದುದನ್ನು ತುಂಬ ಮೆಚ್ಚಿಕೊಂಡರು. Ethics ಮೇಲೆ Hartmann ಓದಿಯೆಂದರು. ಆಗಲೂ ನನಗೆ ಅವರು ಮೇಷ್ಟ್ರೇ ಆಗಿದ್ದರು.

ಎರಡನೆಯ ಸಲಹೋದುದು ಎಮ್. ಎನ್. ರಾಯ್ ಅವರ "ಇಂಡಿಪೆಂಡೆಂಟ್ ಇಂಡಿಯಾ" ಎಂಬ ನಿಯತಕಾಲಿಕಕ್ಕೆ ಚಂದಾದಾರರಾಗಿರಿ ಎಂದು ಕೇಳಲು. ಕೆಲವು ಪ್ರತಿಗಳನ್ನೂ ತೆಗೆದುಕೊಂಡು ಹೋಗಿದ್ದೆ. ತಿರುವಿ ಹಾಕಿದರು. ಕಾಲೇಜ್ ಮೇಷ್ಟ್ರು ಯಾರಾದರೂ ಚಂದಾದಾರರಾಗಿದ್ದಾರೆಯೇ ಎಂದು ಪಟ್ಟಿ ನೋಡಿದರು. ಓ. ಕೆ. ನಂಬಿಯಾರ್ ಹೆಸರು ಮಾತ್ರ ಇತ್ತು. ತಾವೂ ಚಂದಾದಾರರಾದರು. ಆಗಾಗ್ಗೆ ಅವರೊಡನೆ ಚರ್ಚೆ ಮಾಡುತ್ತಲೇ ಇದ್ದೆ. ವಿಷಯ ಹೆಚ್ಚಾಗಿ ರಾಜಕಾರಣ ಮತ್ತು ಅರ್ಥಶಾಸ್ತ್ರ. ಆಗತಾನೇ ಸಿ.ಎನ್. ವಕೀಲ್ ಬರೆದಿದ್ದ "The falling Rupee" ಎಂಬ Pamphlet ಪ್ರಕಟವಾಗಿತ್ತು. ಅದನ್ನು ಚರ್ಚಿಸುತ್ತಾ ನಮ್ಮ ರೂಪಾಯಿಯನ್ನು ಇಂಗ್ಲೆಂಡಿನ ಪೌಂಡಿಗೆ ತಳಕು ಹಾಕಿದ ರೀತಿ, gold standard, gold exchange standard ಇವುಗಳ ಮೇಲೆಲ್ಲ ಅದ್ಭುತವಾಗಿ ತಿಳಿಹೇಳಿದರು. ಅವರ

ಜೊತೆಯಲ್ಲಿ ಪ್ರತಿಸಲ ಮಾತನಾಡಿದಾಗೂ "ಮೇಷ್ಟ್ರೆಂದರೆ ಇವರಯ್ಯ" ಎಂಬ ಭಾವನೆ ಬರುತ್ತಿತ್ತು.

ವಿ. ಸೀ. ಯವರನ್ನು ಕವಿಯೆಂದು, ವಿಮರ್ಶಕರೆಂದು ಏನೇನೋ ಎಂದು ಜನರು ಗುರುತಿಸುತ್ತಾರೆ. ನಾನು ಮಾತ್ರ ಅವರನ್ನು ಗುರುತಿಸಿವುದು "ನಮ್ಮ ಮೇಷ್ಟ್ರು" ಎಂದೇ.

ಈ ಎಲ್ಲ ನೆನಪುಗಳು ಸುಳಿದು ಹೋಗುವ ಹೊತ್ತಿಗೆ ಮೇಷ್ಟ್ರ ದೇಹ ಹೊರಗೆ ತಂದರು. ಅಂತಿಮ ಪ್ರಯಾಣಕ್ಕೆ ಸಿದ್ಧತೆ ನಡೆದಿತ್ತು. ಅವರನ್ನು ಬೀಳ್ಕೊಡಲು ಯಾವ ಮಾತು ಹೇಳುವುದು ಎಂಬ ಪ್ರಶ್ನೆಗೆ ಉತ್ತರ ತಾನಾಗಿಯೇ ಬಂತು–ಷೇಕ್ಸ್ ಪಿಯರನ "Good night, sweet prince, and flight of angels sing thee to thy rest"

ನನ್ನ ಮನಸ್ಸು ದಿನಜೀವನಕ್ಕೆ ಮಣಿಯುತ್ತದೆ. ಇಲ್ಲಿನ ನೋವು, ನಿರಾಸೆ, ಪ್ರೀತಿ, ಇಲ್ಲಿಯ ಔದಾರ್ಯ, ಸ್ನೇಹದ ನೆರವು, ಕಾರುಣ್ಯ ನನಗೆ ತುಂಬಾ ಪ್ರಿಯ.

Your Chilly stars I can forgo
This warm kind world is all I know
ಎಂದೂ, *All beuteous things for which we live*
By laws of time and space decay ;
But oh! the very reason why
I clasp them, is because they die

ಎಂದು ನುಡಿದ ಕವಿಯ ಮಾತು ನನಗೆ ಬಹುಮೆಚ್ಚಿನದು. ಆದರಲ್ಲಿ ಜೀವನದ ಪ್ರೇಮ ವಿದೆ; ಅಬ್ಬರವಿಲ್ಲ, ಪೆಗ್ಗಿಯಲ್ಲ, ವಿನಯದ ಸಂತೋಷವಿದೆ. ಅಲ್ಲದೆ ನಿತ್ಯ, ಅನಂತ ಎಂಬ ಮೋಹಗಳಿಂದ ಕಾಲವನ್ನೂ ಚಲಿಸುವ ಜಗತ್ತಿನ ವ್ಯವಹಾರಗಳನ್ನೂ ನಿರಾಕರಿಸಿ ನಮ್ಮ ತಾತ್ವಿಕ ಚಿತ್ತವೃತ್ತಿಯೇ ಬಡವಾಯಿತೇನೋ, ಆ ಮಟ್ಟಿಗೆ ಅಸತ್ಯವಾಯಿ ತೇನೋ ಎನ್ನಿಸುತ್ತದೆ, ಕೆಲ ವೇಳೆ ನನಗೆ.

ವಿ.ಸೀ.
ಹೆಜ್ಜೆ ಪಾಡು (ಮುನ್ನುಡಿ)

ಟಿಪ್ಪಣಿಗಳು

'ಒಂಟಿತನ' / ಚಿ. ಶ್ರೀನಿವಾಸರಾಜು

ನನ್ನನ್ನು ಕಳೆದ ಒಂದೆರಡು ತಿಂಗಳಿಂದ, ನನ್ನ ಇಬ್ಬರು ಗೆಳೆಯರ ಅನಿರೀಕ್ಷಿತ ಸಾವಿನ ರೀತಿ ಕಾಡುತ್ತಿದೆ. ಅವರಿಬ್ಬರೂ ನಿಮಗೂ ತಿಳಿದವರೆ. ಒಬ್ಬ ಮಿತ್ರ ಎಂ. ಎಸ್. ಜೈಪ್ರಕಾಶ್, ಮತ್ತೊಬ್ಬ ಮಿತ್ರ ದೇವಯ್ಯ ಹರವೆ. ಇಂದಿನ ಕನ್ನಡ ಸಾಹಿತ್ಯಲೋಕದಲ್ಲಿ ಪರಿಚಿತರಾಗಿದ್ದ ಇವರಿಬ್ಬರೂ ಸತ್ತದ್ದು ಒಂದೊಂದು ರೀತಿ. ಜೈಪ್ರಕಾಶ್ ಮಾನಸಿಕ ದ್ವಂದ್ವದ ಒತ್ತಡಕ್ಕೆ ಸಿಕ್ಕಿ, ಸೋತು ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ದೀನದಲಿತರ ನೋವಿಗೆ ಮಾತಾಗಿ ಸಂಘಟನೆ ಮಾಡುತ್ತಿದ್ದ ದೇವಯ್ಯ ಹರವೆ ಸತ್ತದ್ದು ಹೃದಯಾಘಾತದಿಂದ. ಒಂದು ಸಾವು ತಾನಾಗಿಯೇ ತಂದುಕೊಂಡದ್ದು. ಇನ್ನೊಂದು ಎಲ್ಲಿಂದಲೋ ಬಂದು ತಟ್ಟನೆ ಅಪ್ಪಳಿಸಿದ್ದು. ಮೂವತ್ತೈದರ ಗಡಿಯನ್ನೂ ದಾಟದ ಈ ಯುವಕರ ಸಾವು ನಮಗೆ ಬೇಡವಾದದ್ದು ನಿಜ. ಆದರೆ ಸಾವಿನ ನಿಗೂಢ ಸೌಂದರ್ಯಕ್ಕೆ ಮತ್ತು ಕ್ರೌರ್ಯಕ್ಕೆ ನಾವೆಲ್ಲಾ ಮೂಕರು.

ದೇವಯ್ಯ ಹರವೆಯ ಅಕಾಲ ಸಾವಿಗೆ ಉತ್ತರವಿಲ್ಲ. ಆದರೆ ಜೈಪ್ರಕಾಶ್ ಆತ್ಮಹತ್ಯೆ ಮಾಡಿಕೊಂಡದ್ದು ಏಕೆ? ನಮಗೆ ಈ ಸಾವು ನೀಡುವ ತಿಳುವಳಿಕೆ ಏನು? ಮನುಷ್ಯ ಬದುಕಿನ ಸೂಕ್ಷ್ಮತೆಗಳಿಗೆ ಸ್ಪಂದಿಸುವುದರಿಂದ ತನ್ನ ವಾತಾವರಣಕ್ಕೆ, ತನ್ನ ಕಲಾ ಮಾಧ್ಯಮಕ್ಕೆ ಹೊಸಧ್ವನಿಗಳನ್ನು ಆಯಾಮಗಳನ್ನು ತಂದುಕೊಡುತ್ತಾನೆ. ಇದನ್ನು ಪಡೆಯಬೇಕಾದರೆ 'ಹುತ್ತಗಟ್ಟಿದ ಚಿತ್ತ'ದ 'ಒಂಟಿತನ' ('ಏಕಾಂತ' ಅನ್ನಿ) ಅನಿವಾರ್ಯ ಎಂದು ನನ್ನ ನಂಬಿಕೆ. ಆದರೆ ಈ 'ಒಂಟಿತನ' ಇಬ್ಬಾಯ ಖಡ್ಗ. ನೇತ್ಯಾತ್ಮಕ (Negative) 'ಒಂಟಿತನ' ವ್ಯಕ್ತಿಯನ್ನು ಪರಿಸರದಿಂದ ದೂರಮಾಡಿ ಸುತ್ತಲೂ ಏರಲಾರದ ಗೋಡೆಯನ್ನು ನಿರ್ಮಿಸಿ, ಪರಿಸರಕ್ಕೂ ನಮಗೂ ಇರುವ ದಾರಿಗಳನ್ನೆಲ್ಲಾ ಮುಚ್ಚಿಬಿಡುತ್ತದೆ. ಕೀಳರಿಮೆಗೆ, ಅಸಹಾಯಕತೆಗೆ ಗುರಿಮಾಡಿ ಬದುಕನ್ನೇ ಆಸ್ಫೋಟಿಸಿ ಬಿಡುತ್ತದೆ. ಇತ್ಯಾತ್ಮಕ (Positive) ವ್ಯಕ್ತಿತ್ವವನ್ನು ನಿಧಾನವಾಗಿ ನಾಶಮಾಡಿ ನೇತ್ಯಾತ್ಮಕ ವ್ಯಕ್ತಿತ್ವವನ್ನು ತುಂಬುತ್ತದೆ. ಆದರೆ ಇದರ ಇತ್ಯಾತ್ಮಕ 'ಒಂಟಿತನ' ಬದುಕನ್ನು ಉಲ್ಲಾಸಗೊಳಿಸಿ, ಪುನರ್ಜನ್ಮವನ್ನು ನೀಡುತ್ತದೆ. ಆದ್ದರಿಂದ ನಾವು 'ಒಂಟಿತನ'ದ ಬದುಕನ್ನು ಸರಿಯಾಗಿ ಆರಿಸಿಕೊಳ್ಳುವುದರಿಂದ ವ್ಯಕ್ತಿತ್ವಕ್ಕೊಂದು ಅರ್ಥ ಬರುತ್ತದೆ.

ಹಿಂದೆ, ನಮ್ಮ ಹಿರಿಯರು ಇತ್ಯಾತ್ಮಕ 'ಒಂಟಿತನ'ಕ್ಕಾಗಿ ತಪಸ್ಸು ಮಾಡಲು ಕಾಡಿಗೆ ಹೋಗುತ್ತಿದ್ದರು; ಪ್ರಕೃತಿಯ ನಿಗೂಢತೆಗಳನ್ನು ಒಲಿಸಿಕೊಳ್ಳುತ್ತಿದ್ದರು; ಮತ್ತೆ ಬಂದು ಜನಕಲ್ಯಾಣಕಾರ್ಯಗಳನ್ನು ಮಾಡುತ್ತಿದ್ದರು. ಈಗಲೂ ಹಳ್ಳಿಗಳಲ್ಲಿ ಬದುಕು

ತ್ತಿರುವ ಮುಗ್ಧ ಜನಕ್ಕೆ ಈ ನೇತ್ಯಾತ್ಮಕ 'ಒಂಟಿತನ'ದ ಕಾಟವಿಲ್ಲ. ಅವರು ತಾವು ನಂಬಿದ ನೆಲ, ಜನ, ಕಾಡು, ಹಕ್ಕಿ, ದನಕರುಗಳೊಂದಿಗೆ ಮಾತನಾಡುತ್ತಾರೆ; ಬದುಕುತ್ತಾರೆ. ಆದರೆ ನಾವು, ಮಹಾನಗರದಲ್ಲಿದ್ದರೂ ಒಂಟಿ, ಅನಾಥರು. ಅಕ್ಕಪಕ್ಕದವರು ಯಾರು, ಏನು, ಹೇಗೆ, ಎಂಬುದು ಗೊತ್ತಿಲ್ಲದ ಯಾಂತ್ರಿಕ ದೃಷ್ಟಿ. ನಾವು ಪ್ರಕೃತಿಯೊಂದಿಗೆ ಸ್ಪಂದಿಸುವುದನ್ನು ಮರೆತು ಬಿಟ್ಟಿದ್ದೇವೆ. ಇದಕ್ಕೆ ನಾವೆಲ್ಲಾ ಕಾರಣರು ಹೇಗೋ ಹಾಗೆ ನಮ್ಮ ಶಿಕ್ಷಣ ಪದ್ಧತಿಕೂಡ ಕಾರಣವಾಗಿರಬಹುದು. ನಮ್ಮ ಉದ್ಧಾರಕ್ಕೆ ನಾವು ಈ ಅಪಾಯದಿಂದ ಪಾರಾಗಬೇಕಾಗಿದೆ. ನಾವು ಈ ನೇತ್ಯಾತ್ಮಕ 'ಒಂಟಿತನ' ದಿಂದ ನರಳಲು ಪ್ರಾರಂಭಿಸಿದ ಕೂಡಲೇ ಸುತ್ತಲಿನ ಗೋಡೆಯಿಂದ ಅನಾಥಧ್ವನಿ, ನಿರಂತರವಾಗಿ ಪ್ರತಿಧ್ವನಿಯಾಗಿ ನಮಗೇ ಅಪ್ಪಳಿಸಿ, ಅಪ್ಪಳಿಸಿ ಕಾಡುತ್ತದೆ, ಕೊಲ್ಲುತ್ತದೆ. ಹೊರಗಿನ ನೋವು–ನಲಿವು, ಪ್ರಕೃತಿಯ ವರ–ಶಾಪ, ಮನುಷ್ಯನ ಸಣ್ಣತನ–ದೊಡ್ಡತನ, ಪ್ರೇಮ-ಕಾಮ ಕಣ್ಮರೆಯಾಗಿ ಜೀವನ ವೈರಾಗ್ಯ ಮೊದಲಾಗುತ್ತದೆ. ಆದ್ದರಿಂದ ಈ 'ಒಂಟಿತನ' ನಮ್ಮ ಸಾವಿನ ಮನೆಯಾಗಬಾರದು ; ಅರಿವಿನ ಮನೆಯಾಗಬೇಕು. ಆಗ ನಮಗೆ 'ಗಿಡಗಂಟೆಯಾ ಕೊರಳೊಳಗಿಂದ ಹಕ್ಕಿಗಳ ಹಾಡು' ಕೇಳಿಸುತ್ತದೆ. 'ಹುಲ್ಲಿನ ಅರೆನಿಮಿಷದ ಹನಿ ಧನ್ಯ'ವಾಗಿ ಕಾಣುತ್ತದೆ ; 'ಯಾರು ಕೊಟ್ಟರು ಬಾನಿಗೊಂದು ಬಂಗಾರದ ಮೆಡಲು' ಎಂದು ವಿಸ್ಮಿತರಾಗುತ್ತೇವೆ ; ಗುಡಿಸಿಲಲ್ಲಿ ನರಳುವವರ ಧ್ವನಿ ಕೇಳಿಸುತ್ತದೆ ; ಮಕ್ಕಳ ತೊದಲ ಮಾತಿನಿಂದ ಆನಂದವುಂಟಾಗುತ್ತದೆ ; ನಲ್ಲ-ನಲ್ಲೆಯರ ಸರಸ ವಿರಸಗಳು ಅರ್ಥವಾಗುತ್ತವೆ; ಆನೆ ಕಾಣುವ ಕಣ್ಣಿಗೆ ಇರುವೆಯೂ ಕಾಣ ತೊಡಗುತ್ತದೆ ; ಹಿಮಾಲಯದ ಮಾನಸ ಸರೋವರದ ಪ್ರಶಾಂತತೆಯನ್ನು ಕಲಾಸಿಪಾಳ್ಯದ ಕೊಚ್ಚೆ ನೀರನ್ನು ನೋಡುವ ಹರವು ಬದುಕಿಗೆ, ಸಾಹಿತ್ಯಕ್ಕೆ ಬರುತ್ತದೆ. ನೇತ್ಯಾತ್ಮಕ 'ಒಂಟಿತನ'ದಿಂದ ತನ್ನ ಬದುಕನ್ನೆ ದ್ವೇಷಿಸಿದರೆ, ಪ್ರಕೃತಿಯೊಂದಿಗೆ ಸಂವಾದವನ್ನು ನಿಲ್ಲಿಸಿದರೆ, ತಾನು ದುರಂತ ತಂದುಕೊಳ್ಳುವುದರ ಜೊತೆಗೆ ಸುತ್ತಲ ಬದುಕಿಗೆ, ಜನಕ್ಕೆ, ದೊಡ್ಡ ಅನ್ಯಾಯ ಮಾಡಿದಂತಾಗುತ್ತದೆ. ಎಲ್ಲಿಯವರೆಗೆ ನಮಗೆ ಚೆನ್ನಾಗಿ ಬದುಕುವ ಆಸೆ ಇರುವುದಿಲ್ಲವೋ ಅಲ್ಲಿಯವರೆಗೆ ಚೆನ್ನಾಗಿರುವುದನ್ನು ಸೃಷ್ಟಿಸಲು ಸಾಧ್ಯವಿಲ್ಲ. ಅಮದು ಮಾಡಿಕೊಂಡ ವ್ಯಕ್ತಿತ್ವವನ್ನು ತುರಕಿಕೊಂಡು ಪರಿಸರಕ್ಕೆ ಕುರುಡಾಗಿ, ಕಿವುಡಾಗಿ ಬಿಚುಕಿ ಚಿತ್ರಹಿಂಸೆಗೆ ಗುರಿಯಾಗಿ ನಾಶವಾದರೆ ಯಾರಿಗೂ ಪ್ರಯೋಜನವಿಲ್ಲ.

ಸ್ನೇಹಿತರೆ, ನಾವು ಅರಿಸಿಕೊಳ್ಳಬೇಕಾದ 'ಒಂಟಿತನ'ದ ಬಗೆಗೆ ಎಚ್ಚರವಿರಬೇಕು. ನೇತ್ಯಾತ್ಮಕ 'ಒಂಟಿತನ'ದಿಂದ ನರಳಿ ಅದಕ್ಕೆ ಅಹುತಿಯಾಗಬಾರದು. ಇತ್ಯಾತ್ಮಕ 'ಒಂಟಿತನ'ದಿಂದ ಪುಟಕ್ಕಿಟ್ಟ ಚಿನ್ನವಾಗಬೇಕು. ನಾವು ಚಿರಕಾಲ ಉಳಿಯುವ ಕಲಾಕೃತಿಗಳನ್ನು ನೀಡಲೇಬೇಕೆಂಬ ಹಠವಾಗಲಿ ಅಹಂಕಾರವಾಗಲಿ ಇಲ್ಲದಿದ್ದರೂ ಚಿಂತೆಯಿಲ್ಲ. ಆದರೆ ಬದುಕನ್ನು ಇಡಿಯಾಗಿ ಪ್ರೀತಿಸಿ ಹತ್ತು ಜನರಿಗೆ ಅನುಕೂಲವಾಗಿ ಬಾಳುವುದನ್ನು ಕಲಿಯಬೇಕು. ನಾವು ಮೊದಲು ಮನುಷ್ಯರಾಗುವುದನ್ನು ಕಲಿತರೆ,